
# ಅನ್ಯಭಾಷೆಗಳು, ಅದ್ಭುತಗಳು, ದರ್ಶನಗಳು ಮತ್ತು ಪ್ರವಾದನೆಗಳು

ಅಧ್ಯಯನ # 49



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 49

## ಅನ್ಯಭಾಷೆಗಳು, ಅದ್ಭುತಗಳು, ದರ್ಶನಗಳು ಮತ್ತು ಪ್ರವಾದನೆಗಳು

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಇಂದು ನಾವು ಕ್ರೈಸ್ತರ ಮಧ್ಯದಲ್ಲಿ ಬಹಳ ಹೆಸರಾಂತರವಾಗಿರುವ ವಿಷಯವನ್ನು ಕುರಿತು ನೋಡಲಿದ್ದೇವೆ !

**ಹೌದು! ಅನ್ಯಭಾಷೆಗಳು, ಅದ್ಭುತಗಳು, ದರ್ಶನಗಳು ಮತ್ತು ಪ್ರವಾದನೆಗಳು ಕುರಿತ ವಿಷಯವಾಗಿವೆ !!**

ಈ ದಿನಗಳಲ್ಲಿ ಹೇರಳವಾಗಿ ನಾವು ಕ್ರೈಸ್ತವಾಹಿನಿಗಳಲ್ಲಿ (ಟಿ.ವಿ) ನೋಡುತ್ತೇವೆ! ಹೌದು ! ಅದನ್ನು "ಪವಿತ್ರಾತ್ಮನ **ವರಗಳು** ಎಂದು ಹೇಳಲಾಗುತ್ತದೆ ! ಇದನ್ನು ಕುರಿತು ಈಗ ನಾವು ಕೆಳಗಿನ ವಾಕ್ಯದಲ್ಲಿ ಓದೋಣ –

**1 ಕೊರಿಂಥದವರಿಗೆ 12:7-11**

"ಆದರೆ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಕ್ಕಾಗಿ ಕೊಡಲ್ಪಟ್ಟಿವೆ. ಒಬ್ಬನಿಗೆ ದೇವರಾತ್ಮನ ಮೂಲಕ ಜ್ಞಾನವಾಕ್ಯವು ಮತ್ತೊಬ್ಬನಿಗೆ ಆ ಆತ್ಮನಿಂದಲೇ ತಿಳಿವಳಿಕೆಯ ವಾಕ್ಯವು ಒಬ್ಬನಿಗೆ ಆ ಆತ್ಮನಿಂದಲೇ ನಂಬಿಕೆಯು ಮತ್ತೊಬ್ಬನಿಗೆ ಆ ಒಬ್ಬ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿಮಾಡುವ ವರವು,

**ಮತ್ತೊಬ್ಬನಿಗೆ ಮಹತ್ಕಾರ್ಯಗಳನ್ನು ಮಾಡುವ ವರವು, ಇನ್ನೊಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಆತ್ಮವನ್ನು ವಿವೇಚಿಸುವ ವರವು, ಮತ್ತೊಬ್ಬನಿಗೆ ವಿವಿಧ ಭಾಷೆಗಳನ್ನಾಡುವ ವರವು, ಒಬ್ಬನಿಗೆ ಭಾಷೆಗಳ ಅರ್ಥವನ್ನು ಬಿಡಿಸಿ ಹೇಳುವ ವರವು ಕೊಡಲ್ಪಡುತ್ತದೆ. ಆದರೆ ಈ ಎಲ್ಲವುಗಳಲ್ಲಿ ಕಾರ್ಯ ಮಾಡುವ ಆ ಒಬ್ಬ ಆತ್ಮನೇ ವರಗಳನ್ನೆಲ್ಲಾ ತನ್ನ ಚಿತ್ತಾನುಸಾರವಾಗಿ ಒಬ್ಬೊಬ್ಬನಿಗೆ ಹಂಚಿಕೊಡುವವನಾಗಿದ್ದಾನೆ."**

ಈ ವಾಕ್ಯವು – ಪವಿತ್ರಾತ್ಮನ "**ವರಗಳ**" ಕುರಿತು ಮಾತನಾಡುತ್ತದೆ. ಮತ್ತು ಈ ಎಲ್ಲಾ ವಿವಿಧ "**ವರಗಳು**", ಅಂದರೆ ಅನ್ಯಭಾಷೆಯನ್ನು ಮಾತನಾಡುವುದು, ಮತ್ತು ಅದ್ಭುತಗಳು ಮತ್ತು ರೋಗಗಳನ್ನು ಗುಣ ಮಾಡುವ ಈ ಎಲ್ಲಾ ವಿಷಯಗಳು ಈ ದಿನಗಳಲ್ಲಿ ಕ್ರೈಸ್ತ ಪಂಗಡಗಳಲ್ಲಿ,

**ಪೆಂಟಕೋಸ್ಟಲ್ ಚರ್ಚ್** ಎಂದು ಕರೆಯಲ್ಪಡುವ ವಿಭಾಗದವರಲ್ಲಿ ಬಹಳ ಹೆಸರು ವಾಸಿಯಾಗಿವೆ.

ಈ ಪೆಂಟಕೋಸ್ಟಲ್ ( ಪಂಚಶತ್ತಮ) ಸಭೆಯ ಪಂಗಡವು ಹೊಸದು.

ಇದು ಕ್ರಿ.ಶ. 1890 ದಶಕಗಳಲ್ಲಿ ಆರಂಭವಾಯಿತು. ಮತ್ತು ಪಂಚಶತ್ತಮ ದಿನದಲ್ಲಿ ಆದಿ ಸಭೆಯ ಅಪೋಸ್ತಲರು ಮತ್ತು ಶಿಶ್ಯರಲ್ಲಿ ನಡೆದ ಅನುಭವಗಳಿಗೆ ಆಧಾರವಾಗಿವೆ.

**ನಿಜಾಂಶವೇನೆಂದರೆ ಇದರ ಹೆಸರೂ ಸಹ ಹೀಗೆಯೇ ಉಂಟಾಯಿತು!**



**ಆದರೆ ಇಲ್ಲಿ ಒಂದು ಮುಖ್ಯವಾದ ವಿಷಯವನ್ನು ಗಮನಿಸಬೇಕಾಗಿದೆ!**

ಈ ಅನ್ಯಭಾಷೆ ಮಾತಾಡುವುದು ಮತ್ತು ಅದ್ಭುತಗಳು ಸಭೆ ಚರಿತ್ರೆಯಲ್ಲಿ ಸುಮಾರು 1700 ವರ್ಷಗಳ ಹಿಂದಿನವರೆಗೆ ಗಮನ ಕೊಡುವುದನ್ನು **ಸಂಪೂರ್ಣವಾಗಿ ಮರೆತು ಬಿಟ್ಟಿತ್ತು.** !!!!!

**ಹಾಗಿರುವಾಗ ಈ "ಪವಿತ್ರಾತ್ಮನ ವರಗಳು" ಇದ್ದಕ್ಕಿದಂತೆ ಕಾಣಿಸಿಕೊಳ್ಳುವ ಅರ್ಥವೇನು?**

**ಈ ವಿಷಯವನ್ನು ಕುರಿತು ಸತ್ಯವೇದವು ಏನು ಬೋಧಿಸುತ್ತದೆ ?**

ಹೌದು! ಈ ವಿಷಯಗಳನ್ನು ಕುರಿತು ಒಂದೊಂದಾಗಿ ಅಧ್ಯಯನ ಮಾಡೋಣ

## ಅನ್ಯಭಾಷೆಗಳಲ್ಲಿ ಮಾತಾಡುವುದು

ಇದು ಪವಿತ್ರಾತ್ಮನ ವರವಾಗಿದ್ದು, ವಿವಿಧ ಭಾಷೆಗಳನ್ನಾಡುವುದಾಗಿದೆ. (1 ಕೊರಿಂಥದವರಿಗೆ 12:10) ಈ (ಶಕ್ತಿಯು) ಬಲವು ಅವರಿಗೆ ಇದ್ದಕ್ಕಿದಂತೆ ಪಂಚಶತ್ತಮದ ದಿನದಲ್ಲಿ ಅವರ ಮೇಲೆ ಬಂದಿತೆಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಅಪೋಸ್ತಲರ ಕೃತ್ಯಗಳು 2:4** - **"ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾಗಿ ಆತ್ಮನು ತಮಗೆ ನುಡಿಯುವ ಶಕ್ತಿಯನ್ನು ಕೊಟ್ಟ ಪ್ರಕಾರ ಅವರು ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದರು"**

ಈ ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುವ ಪವಿತ್ರಾತ್ಮನ ವರವನ್ನು (ಮುಂದೆ ) ನಂತರದಲ್ಲಿ ಅಪೋಸ್ತಲರು ಬೇರೆ ವಿಶ್ವಾಸಿಗಳ **"ಮೇಲೆ ಕೈಗಳನ್ನಿಡುವಾಗ"** (ಅಪೋಸ್ತಲರ ಕೃತ್ಯಗಳು 19:6) ಅವರಿಗೂ ವರ್ಗಾವಣೆಯಾಯಿತು.



ಆದರೆ ಇಲ್ಲಿ ನಾವು ಗಮನಿಸುವದೇನೆಂದರೆ, ಆದಿ ಸಭೆಯ ಆರಾಧನಾ ಕೂಟಗಳಲ್ಲಿ **"ಅನ್ಯಭಾಷೆಗಳನ್ನಾಡುವಾಗ"** ಕೆಲವು ನಿಬಂಧನೆಗಳನ್ನು ನೆರವೇರಿಸಬೇಕಾಗಿತ್ತೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


**1 ಕೊರಿಂಥದವರಿಗೆ 14: 27,28**

**"ಅನ್ಯಭಾಷೆಗಳನ್ನಾಡುವುದಾದರೆ ಇಬ್ಬರು ಅಥವಾ ಅವಶ್ಯವಿದ್ದರೆ ಮೂವರಿಗಿಂತ ಹೆಚ್ಚಿಲ್ಲದೆ ಒಬ್ಬೊಬ್ಬರಾಗಿ ಮಾತನಾಡಬೇಕು; ಮತ್ತು ಒಬ್ಬನು ಅದರ ಅರ್ಥವನ್ನು ಹೇಳಬೇಕು. ಅರ್ಥವನ್ನು ಹೇಳುವವನಿಲ್ಲದಿದ್ದರೆ ಅನ್ಯಭಾಷೆಗಳನ್ನಾಡುವವನು ಸಭೆಯಲ್ಲಿ ಸುಮ್ಮನಿರಲಿ; ತನ್ನೊಂದಿಗೂ ಮತ್ತು ದೇವರೊಂದಿಗೂ ಮಾತನಾಡಿಕೊಳ್ಳಲಿ."**

**ಹೌದು ! ನೀವು ನೋಡಿದಿರಾ ?**

ಆದಿ ಸಭೆಯ ಸಭಾ ಕೂಟಗಳಲ್ಲಿ ಪವಿತ್ರಾತ್ಮದ ವರವಾದ ಅನ್ಯಭಾಷೆಯನ್ನು ಮಾತನಾಡುವಾಗ ಕೆಲವು ನಿಬಂಧನೆಗಳು ಮತ್ತು ಕ್ರಮಗಳನ್ನು ಅನುಸರಿಸಬೇಕಾಗಿತ್ತು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

ಅದೇನೆಂದು ನಾವು ಹೀಗೆ ಓದುತ್ತೇವೆ –



**"…..ಇಬ್ಬರು ಅಥವಾ ಮೂವರಿಗಿಂತ ಹೆಚ್ಚಿಲ್ಲದೆ….."**

ಹೌದು ! ಒಂದು ಕೂಟದಲ್ಲಿ ಜನರು ಅನ್ಯಭಾಷೆಗಳನ್ನು ಮಾತನಾಡುವುದಕ್ಕೆ **ಗರಿಷ್ಠಮಟ್ಟ** ಮೂರು ಜನರಾಗಿ ಇರಬೇಕು !

ನಂತರ ನಾವು ಹೀಗೆ ಓದುತ್ತೇವೆ

**"…..ಒಬ್ಬೊಬ್ಬರಾಗಿ ಮಾತನಾಡಬೇಕು…."**

ಅಂದರೆ ಎನ್.ಐ.ವಿ. ಭಾಷಾಂತರದಲ್ಲಿ ನಾವು ಓದುವುದೇನೆಂದರೆ, ಅನ್ಯಭಾಷೆಗಳನ್ನಾಡುವಾಗ ಒಬ್ಬೊಬ್ಬರಾಗಿ ಮತ್ತು **"ಒಂದು ಸಲಕ್ಕೆ ಒಬ್ಬನು ಮಾತ್ರ"** ಮಾತನಾಡಬೇಕು.

ಒಂದೇ ಸಲಕ್ಕೆ ಮೂವರ ಸೇರಿ ಎಂದಿಗೂ **ಮಾತನಾಡಬಾರದು** !!!

ನಂತರ ನಾವು ಹೀಗೆ ಓದುತ್ತೇವೆ –


**"....ಒಬ್ಬನು ಅರ್ಥವನ್ನು ಹೇಳಲಿ...."**

ಹೌದು! **"ಅನ್ಯಭಾಷೆಗಳನ್ನಾಡಿದಾಗ"**, ಅದರ ಅರ್ಥವನ್ನು ಹೇಳಲು ಮತ್ತೊಬ್ಬ ವ್ಯಕ್ತಿ ಸಹ ಇರಬೇಕು.

ನಿಜಾಂಶದಲ್ಲಿ, ಈ ನಿಬಂಧನೆಯು **ಎಷ್ಟು ಕಟ್ಟುನಿಟ್ಟಾಗಿತ್ತೆಂದರೆ** ಅಪೋಸ್ತಲನು ಹೀಗೆ ಬರೆಯುತ್ತಾನೆ.

**"......ಅರ್ಥವನ್ನು ಹೇಳುವವನಿಲ್ಲದಿದ್ದರೆ ಅವನು ಸಭೆಯಲ್ಲಿ ಮೌನವಾಗಿರಲಿ....."**

ಹೌದು ! **"ಅನ್ಯಭಾಷೆಗಳನ್ನಾಡಿದಾಗ"** ಅದರ ಅರ್ಥವನ್ನು ಹೇಳುವವನಿಲ್ಲದಿದ್ದರೆ ಅವನು ಮೌನವಾಗಿರಬೇಕು ಎಂದು ಸೂಚಿಸಲಾಗಿದೆ ಮತ್ತು **ಅವನು ಮಾತನಾಡುವುದಕ್ಕೆ ಅನುಮತಿಯೇ ಇಲ್ಲ** !!





**ಈ ವಾಕ್ಯಗಳು ನಮ್ಮನ್ನು ಪ್ರಚೋಧಿಸುವಂತಿದೆಯಲ್ಲವೆ ?**

**ಮತ್ತು ಈ ದಿನಗಳ ಸಭೆಗಳಲ್ಲಿ "ಅನ್ಯಭಾಷೆಗಳನ್ನಾಡುವುದಕ್ಕೆ ಈ ನಿಬಂಧನೆಗಳನ್ನು ಪರಿಪಾಲಿಸುವುದನ್ನು ನಾವು ನೋಡುತ್ತೇವೆಯೇ?**

ಈಗ ನಾವು ಆದಿಸಭೆಯಲ್ಲಿ **"ಅನ್ಯಭಾಷೆಗಳನ್ನಾಡುವ"** ಉದ್ದೇಶ ಏನೆಂಬುದನ್ನು ನೋಡೋಣ.

ಕೆಳಗಿನ ವಾಕ್ಯವನ್ನು ಓದೋಣ.

**1 ಕೊರಿಂಥದವರಿಗೆ 14:6,26**

**"ಆದರೆ ಸಹೋದರರೇ, ನಾನು ನಿಮ್ಮ ಬಳಿಗೆ ಬಂದು ದೇವರು ತಿಳಿಸಿದ್ದನ್ನು ಪ್ರಕಟಿಸದೆ, ಜ್ಞಾನವಾಕ್ಯಗಳನ್ನಾಡದೆ, ಪ್ರವಾದನೆಯನ್ನು ಹೇಳದೆ, ಉಪದೇಶಮಾಡದೆ, ಅನ್ಯಭಾಷೆಗಳನ್ನು ಮಾತ್ರ ಮಾತನಾಡುವವನಾಗಿದ್ದರೆ ನನ್ನಿಂದ ನಿಮಗೇನು ಪ್ರಯೋಜನವಾದೀತು?**

ಹಾಗಾದರೇನು, ಸಹೋದರರರೇ? ನೀವು ಸಭೆಯಲ್ಲಿ ಸೇರಿಬರುವಾಗ ಒಬ್ಬನು ಹಾಡುವುದೂ, ಒಬ್ಬನು ಉಪದೇಶಮಾಡುವುದೂ, ಒಬ್ಬನು ತನಗೆ ಪ್ರಕಟವಾದದ್ದನ್ನು ತಿಳಿಸುವುದೂ, ಇನ್ನೂ ಒಬ್ಬನು ಅನ್ಯಭಾಷೆಯನ್ನಾಡುವುದೂ, ಒಬ್ಬನು ಅದರ ಅರ್ಥವನ್ನು ಹೇಳುವುದುಂಟು. ನೀವು ಏನು ಮಾಡಿದರೂ ಸಭೆಯ ಭಕ್ತಿವೃದ್ಧಿಗಾಗಿಯೇ ಮಾಡಿರಿ."

ಹೌದು ! "ಅನ್ಯಭಾಷೆಗಳನ್ನಾಡುವುದು" ದೇವರಿಂದ ಬರುವ

➡ ದೈವೀಕ ಪ್ರಕಟಣೆಯ ಸಾಧನವಾಗಿದ್ದು, ಅದು ಸಭೆಯ ಭಕ್ತಿವೃದ್ಧಿಗಾಗಿ ಅಥವಾ ಆತ್ಮೀಕ ಬೆಳವಣಿಗೆಗಾಗಿ ಉಂಟಾಗಿದ್ದು ಈ "ಅನ್ಯಭಾಷೆಗಳನ್ನಾಡುವ" ವರವು ಹೊಸೊಡಂಬಡಿಕೆಯನ್ನು **ಬರೆಯುವುದಕ್ಕೆ ಮೊದಲು** ಇದರ ಮೂಲಕ ದೇವರಿಂದ ವಾಕ್ಯಗಳು ಮತ್ತು ಸಂದೇಶಗಳಿಂದ ಪ್ರಕಟವಾಗುತ್ತಿತ್ತು!!




ಈಗ ನಾವು ಅಪೋಸ್ತಲನಾದ ಪೌಲನು "**ಅನ್ಯಭಾಷೆ**"ಯ ವರಗಳನ್ನು ಕುರಿತು ಏನೋ ಬರೆದಿರುವುದನ್ನು ಬಹಳವಾಗಿ ತಪ್ಪಾಗಿ ಅರ್ಥ ಮಾಡಿಕೊಂಡಿರುವುದರ ಕುರಿತು ಓದೋಣ!

ಹೌದು ! ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ –

1 ಕೊರಿಂಥದವರಿಗೆ 14:2

"ಅನ್ಯಭಾಷೆಗಳನ್ನಾಡುವವನು ದೇವರ ಸಂಗಡ ಮಾತನಾಡುತ್ತಾನೆಯೇ ಹೊರತು ಮನುಷ್ಯರ ಸಂಗಡ ಅಲ್ಲ. ಅವನು ಆತ್ಮ ಪ್ರೇರಿತನಾಗಿ ಗುಪ್ತ ವಿಷಯಗಳನ್ನಾಡುತ್ತಾನೆ. ಅವನು ಮಾತನಾಡುವ ಮಾತುಗಳನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ."



ಹೌದು ! ಈ ವಾಕ್ಯವನ್ನು ಈ ದಿನಗಳಲ್ಲಿ ಯಾತಕ್ಕಾಗಿ ಉಪಯೋಗಿಸುತ್ತಾರೆ ಎಂದರೆ, ಯಾರ್ಯಾರು "ಅನ್ಯಭಾಷೆಯಲ್ಲಿ ಮಾತನಾಡುತ್ತಾರೋ

➡ ಆ ಭಾಷೆಯು ದೇವರಿಗೆ ಮಾತ್ರ ಗೊತ್ತಾಗುತ್ತದೆ.

ಮತ್ತು ಇನ್ನು ಇದು ಸೈತಾನನಿಗೆ ಅರ್ಥವಾಗುವುದಿಲ್ಲ !!

ಆದ್ದರಿಂದ, ಹುಚ್ಚು ವೈರಾಗ್ಯದಿಂದ ಈ ದಿನಗಳಲ್ಲಿ "ಅನ್ಯಭಾಷೆ" ಯನ್ನು ಮಾತನಾಡಲು ಎಲ್ಲಾ ಸನ್ನಿವೇಶಗಳನ್ನು ಉಪಯೋಗಿಸುತ್ತಾರೆ.



**ಬಸ್ಸಿನಲ್ಲಿ ಪ್ರಯಾಣ ಮಾಡುವಾಗ**
**... ರಸ್ತೆಗಳಲ್ಲಿ ನಡೆಯುವಾಗ**
**..... ಮನೆಯಲ್ಲಿ ವಿಶ್ರಾಂತಿ ಹೊಂದುವಾಗ, ಇತರೆ**

ಅಂತಹ ಜನರನ್ನು ನೀವು ಶಬ್ಧವಿಲ್ಲದ ಮಾತುಗಳಲ್ಲಿ **ಅವರ ತುಟಿಗಳನ್ನು ನಿರಂತರವಾಗಿ ಆಡಿಸುತ್ತಿರುವುದನ್ನು** ಗಮನಿಸಿರಬಹುದು !

**ಹೌದು ! ಅವರು "ಅನ್ಯಭಾಷೆ"ಯಲ್ಲಿ ದೇವರೊಂದಿಗೆ ಮಾತನಾಡುತ್ತಾರೆ ಎಂದು ಹೇಳಿಕೊಳ್ಳುತ್ತಾರೆ !!**



**ಇವೆಲ್ಲವೂ ನಿಜವೇ ?**
**ನಿಜವಾಗಿಯೂ ಸತ್ಯವೇದವು ನಮಗೆ ಹೀಗೆಯೇ ಬೋಧಿಸುತ್ತದೆಯೆ?**

ಇದನ್ನು ಕುರಿತು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ!

ಮೊದಲನೆಯದಾಗಿ ನಾವು ಗಮನಿಸಬೇಕಾದದ್ದೇನೆಂದರೆ, ಸತ್ಯವೇದವು ನಮಗೆ ಬೋಧಿಸುವುದೇನೆಂದರೆ, ಯಾರು ಅನ್ಯಭಾಷೆಯಲ್ಲಿ ಮಾತನಾಡುತ್ತಾರೋ ಅವರು –

**ಗೊತ್ತಿಲ್ಲದ ಭಾಷೆಯಲ್ಲಿ ಮಾತನಾಡುತ್ತಾರೆ...**

ಇನ್ನೂ ಹೇಳುವುದೇನೆಂದರೆ –

**"ಅವನು ರಹಸ್ಯಗಳನ್ನು ನುಡಿಯುತ್ತಿದ್ದರೂ... ಯಾರೂ ಅವನನ್ನು ತಿಳುಕೊಳ್ಳುವುದಿಲ್ಲ"**

## ಇದರ ಅರ್ಥವೇನು?

ಇಂತಹ ಅನುಭವವು ಯಾರಾದರೂ ಚೈನಾ ಅಥವಾ ಜಪಾನಿಯು ಸಭಾಂಗಣದಲ್ಲಿ ಮಾತನಾಡುವಾಗ ಆಂಗ್ಲ ಅಥವಾ ತಮಿಳು ಭಾಷೆ ಮಾತ್ರ ಗೊತ್ತಿರುವವನಿಗೆ ಉಂಟಾಗುತ್ತದೆ!

**(ಅವರಿಗೆ ಒಂದೇ ಒಂದು ಪದವು ಅರ್ಥವಾಗುವುದಿಲ್ಲ !!! )**

ಮುಂದೆ ಆ ಸಭಾಂಗಣದಲ್ಲಿ ಏನು ಮಾತಾಡುತ್ತಿದ್ದರು ಎಂದು ಕೇಳಿದರೆ, ಅವರೆಲ್ಲರೂ ಹೀಗೆ ಉತ್ತರಿಸುತ್ತಾರೆ –

## "ದೇವರೇ ಬಲ್ಲ" !! ("GOD KNOWS")

ಇದು ನಿಜವಾದ ಮಾತಾಗಿದೆ !!

ಏಕೆಂದರೆ ದೇವರಿಗೆ ಎಲ್ಲಾ ಭಾಷೆಗೊತ್ತಿದೆ, ಕಾರಣವೇನೆಂದರೆ, ಆತನೇ ಎಲ್ಲಾ ಭಾಷೆಗಳನ್ನು ಉಂಟು ಮಾಡಿದವನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

**ಆದಿಕಾಂಡ 11:6-7 "ಕರ್ತನು--ಇಗೋ,... ಅವರೆಲ್ಲರಿಗೆ ಭಾಷೆಯೂ ಒಂದೇ;.... ಆದದರಿಂದ ನಾವು ಇಳಿದು ಹೋಗಿ ಅವರು ಒಬ್ಬರ ಮಾತು ಒಬ್ಬರು ತಿಳಿಯದ ಹಾಗೆ ಅವರ ಭಾಷೆಯನ್ನು ಗಲಿಬಿಲಿ ಮಾಡೋಣ ಅಂದನು."**



ಹೌದು! ದೇವರಿಗೆ ಯಾವ ನಿರ್ದಿಷ್ಟವಾದ ಭಾಷೆಯು ಇಲ್ಲ, ಮತ್ತು – ಆತನೇ ಎಲ್ಲಾ ಭಾಷೆಗಳಿಗೆ **ಮೂಲ** ಕಾರಣವಾಗಿದ್ದಾನೆ. ಮತ್ತು "ತಿಳಿಯದ ಭಾಷೆ"ಯ ವಿಷಯದಲ್ಲಿ, ಅದು ನಿಜ ಮತ್ತು ಸರಿಯಾಗಿದ್ದು, ಅವನು "ಮನುಷ್ಯರ ಸಂಗಡ ಮಾತನಾಡುವುದಿಲ್ಲ ದೇವರ ಸಂಗಡಲೇ ಮಾತನಾಡುತ್ತಾನೆ."

**ನಿಜವಾಗಿಯೂ ದೇವರು ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ !!**

**ಇದನ್ನೇ ಅಪೋಸ್ತಲನಾದ ಪೌಲನು ಇಲ್ಲಿ ಹೇಳಲು ಪ್ರಯತ್ನಿಸುತ್ತಿರುವುದು !!**

ಹೌದು! "ಅನ್ಯಭಾಷೆ" ಮಾತನ್ನಾಡುವುದು ಕೇಳಿಸಿಕೊಳ್ಳುವವರಿಗೆ ತಿಳಿಯದೆ ಅಥವಾ ಅರ್ಥಮಾಡಿಕೊಳ್ಳದೆ ಇರುವುದು, ಅದು ಮನುಷ್ಯರಿಗೆ .... "ರಹಸ್ಯ"ವಾಗಿರುತ್ತದೆ, ಆ ಪದಗಳನ್ನು ಅವರು ಗ್ರಹಿಸಲಾರರು.... ಆದರೆ ಇದನ್ನು ದೇವರು ಬಿಟ್ಟರೆ ಮತ್ಯಾರೂ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ!

ನಂತರ ನಾವು ನೋಡುವುದೇನೆಂದರೆ, ಅನ್ಯಭಾಷೆಯನ್ನಾಡುವುದು ನಂಬದವರಿಗೆ ಸೂಚನೆಯಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.



**1 ಕೊರಿಂಥದವರಿಗೆ 14:22**

**"ಆದ್ದರಿಂದ ಅನ್ಯಭಾಷೆಗಳನ್ನಾಡುವುದು ಯೇಸುವನ್ನು ನಂಬದವರಿಗೆ ಸೂಚನೆಯಾಗಿದೆಯೇ ಹೊರತು ಯೇಸುವನ್ನು ನಂಬುವವರಿಗೆ ಸೂಚನೆಯಲ್ಲವೆಂದು ನಾವು ತಿಳಿದುಕೊಳ್ಳಬೇಕು. ಆದರೆ ಪ್ರವಾದನೆಯು ಯೇಸುವನ್ನು ನಂಬದವರಿಗಾಗಿಯಲ್ಲ ನಂಬುವವರಿಗಾಗಿಯೇ ಇದೆ."**

ಹೌದು! "**ಅನ್ಯಭಾಷೆ ಮಾತನ್ನಾಡುವುದು**"

➡ ನಂಬದವರಿಗೆ ಸೂಚನೆಯಾಗಿರಬೇಕು !

ಈ ದಿನಗಳಲ್ಲಿ ಈ ವಿಷಯವು ವ್ಯತಿರಿಕ್ತ (ಉಲ್ಟಾ) ಆಗಿದೆ ಎಂದು ಆಶ್ಚರ್ಯವಾಗಿದೆಯಲ್ಲವೆ ಮತ್ತು "ಅನ್ಯಭಾಷೆಯನ್ನಾಡುವುದು ನಂಬುವವರಿಗೆ ಸೂಚನೆಯಾಗಿದೆ !!

ಆದರೆ ಆದಿ ಸಭೆಗಳಲ್ಲಿ ಹಾಗಿರಲಿಲ್ಲವೆಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

## ಅಪೋಸ್ತಲರ ಕೃತ್ಯಗಳು 2:8, 12

"ಆದರೆ ನಾವು ಪ್ರತಿಯೊಬ್ಬರು ನಮ್ಮ ನಮ್ಮ ಮಾತೃಭಾಷೆಯಲ್ಲಿ ಇವರು ಮಾತನಾಡುವುದನ್ನು ಕೇಳುತ್ತಿದ್ದೇವಲ್ಲಾ, ಇದು ಹೇಗೆ? - ಎಲ್ಲರೂ ಬೆರಗಾಗಿ ಕಳವಳಗೊಂಡು, "ಇದೇನಾಗಿರಬಹುದು ಎಂದು ಒಬ್ಬರನ್ನೊಬ್ಬರು ಕೇಳುತ್ತಿದ್ದರು?"

ಹೌದು ಇದು ನಂಬದವರಿಗೆ ವಿಸ್ಮಯವಾಗಿತ್ತು !
ಮತ್ತು ಇದು ಅವರಿಗೆ ದೇವರ ಶಕ್ತಿಯ ಪ್ರದರ್ಶನವಾಗಿತ್ತು!

ಈಗ, ಅಪೋಸ್ತಲನಾದ ಪೌಲನು ಅತ್ಯಧಿಕ "**ಅನ್ಯಭಾಷೆ**"ಗಳನ್ನು ಆಡುತ್ತಿದ್ದನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## 1 ಕೊರಿಂಥದವರಿಗೆ 14:18

"ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಅನ್ಯಭಾಷೆಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ."




ಹೌದು ! ಅಪೋಸ್ತಲನಾದ ಪೌಲನು ಅನೇಕ ಮತ್ತು ವಿವಿಧ "**ಭಾಷೆ**"ಗಳನ್ನು ಮಾತನಾಡಿದನು, ಏಕೆಂದರೆ, ಆತನು ಅನ್ಯಜನರಿಗೆ ವಿಶೇಷವಾಗಿ ಆರಿಸಲ್ಪಟ್ಟ ಅಪೋಸ್ತಲನಾಗಿದ್ದನು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಗಲಾತ್ಯದವರಿಗೆ 2:8

"ಸುನ್ನತಿಯಾದವರಿಗೆ ಪೇತ್ರನ ಅಪೋಸ್ತಲತನವು ಪರಿಣಾಮವನ್ನುಂಟು ಮಾಡುವ ಹಾಗೆ ಮಾಡಿದಾತನೇ ಅನ್ಯ ಜನರಿಗೆ ನನ್ನ ಅಪೋಸ್ತಲತನವು ಶಕ್ತಿಯುಳ್ಳದ್ದಾಗಿರುವಂತೆ ಮಾಡಿದ್ದನ್ನು ಅವರು ಕಂಡರು"

ಅದೇ ರೀತಿ **ಅಪೋಸ್ತಲನಾದ ತೋಮನಿಗೆ** "**ಅನ್ಯಭಾಷೆ**"ಗಳಾದ

## ತಮಿಳು ಮತ್ತು ಮಳಯಾಲಂ



ಭಾಷೆಗಳು ಕೊಟ್ಟಿರಬೇಕು, ಏಕೆಂದರೆ, ಭಾರತ ದೇಶದಲ್ಲಿರುವ ತಮಿಳುನಾಡು ಮತ್ತು ಕೇರಳನಾಡುಗಳಲ್ಲಿ ಆತನು ವ್ಯಾಪಕವಾಗಿ ಸೇವೆ ಮಾಡಿದನು.

ಆದರೂ ಸಭಾ ಕೂಟಗಳಲ್ಲಿ ಒಂದು **ವೇಳೆ ಯಾರಿಗೂ ಅರ್ಥವಾಗದಿದ್ದರೆ** ನಂಬುದವವರು ಈ ವರವನ್ನು ಉಯೋಗಿಸಬಾರದೆಂದು ಅಪೋಸ್ತಲನಾದ ಪೌಲನು ಹೇಳುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### 1 ಕೊರಿಂಥದವರಿಗೆ 14:9,23

**"ಹಾಗೆಯೇ ನೀವೂ ಸಹ ಸ್ಪಷ್ಟವಾದ ಭಾಷೆಯನ್ನು ನಿಮ್ಮ ಬಾಯಿಂದ ಮಾತನಾಡದೆ ಹೋದರೆ, ನಿಮ್ಮ ಮಾತಿನ ಅರ್ಥವನ್ನು ಹೇಗೆ ತಿಳಿದುಕೊಳ್ಳಲು ಸಾಧ್ಯ? ನೀವು ಗಾಳಿಯ ಸಂಗಡ ಮಾತನಾಡಿದ ಹಾಗಿರುವುದಷ್ಟೆ. ಹೀಗಿರುವಲ್ಲಿ ಸಭೆಯೆಲ್ಲಾ ಒಂದೇ ಸ್ಥಳದಲ್ಲಿ ಸೇರಿಬಂದಾಗ ಎಲ್ಲರೂ ಅನ್ಯಭಾಷೆಗಳನ್ನಾಡಿದರೆ ಈ ಭಾಷೆಯನ್ನು ತಿಳಿಯದ ಬೇರೆಯವರು ಅಥವಾ ಕ್ರಿಸ್ತ ನಂಬಿಕೆಯಿಲ್ಲದವರು ಒಳಗೆ ಬಂದು ನೋಡಿ, ನಿಮಗೆ ಹುಚ್ಚು ಹಿಡಿದಿದೆ ಎಂದು ಹೇಳುವುದಿಲ್ಲವೋ?"**

## ಹೌದು! ಅಪೋಸ್ತಲನಾದ ಪೌಲನು ಏನು ಹೇಳುತ್ತಾನೆಂದು ನೋಡಿದಿರಾ?

ಆತನು ಈಗಿನ ಬಹುತೇಕ ಎಲ್ಲಾ ಸಭೆಗಳಲ್ಲಿರುವ ಸನ್ನಿವೇಶ ಅಥವಾ ಸ್ಥಿತಿಯನ್ನು ಕುರಿತು ವಿವರಿಸುತ್ತಿಲ್ಲವೆ.

ಅಂದರೆ **ಎಲ್ಲರೂ** ಒಟ್ಟು ಸೇರುತ್ತಾರೆ ಮತ್ತು ಎಲ್ಲರೂ **ಒಂದೇ ಸಾರಿ ಒಟ್ಟಿಗೆ** “ಅನ್ಯಭಾಷೆಗಳನ್ನಾಡುತ್ತಾರೆ ? !



ಹೌದು ! ಇದನ್ನು ಕುರಿತೆ ಅಪೋಸ್ತಲನಾದ ಪೌಲನು ಹೀಗೆ **ಎಂದಿಗೂ ಮಾಡಬಾರದೆಂದು ಹೇಳುತ್ತಾನೆ** !!

ಏಕೆಂದರೆ ಆತನು ದೇವರನ್ನು ಕುರಿತು ವಿವರಿಸುತ್ತಾ ಹೀಗೆ ಹೇಳುತ್ತಾನೆ.

**1 ಕೊರಿಂಥದವರಿಗೆ 14:33**

**“ಪರಿಶುದ್ಧರ ಎಲ್ಲಾ ಸಭೆಗಳಲ್ಲಿರುವ ಪ್ರಕಾರ ದೇವರು ಸಮಾಧಾನಕ್ಕೆ ಹೊರತು ಗಲಿಬಿಲಿಗೆ ಕಾರಣವಲ್ಲ”**

ಇದನ್ನು ಎನ್.ಐ.ವಿ.(NIV)ಯಲ್ಲಿ ಹೀಗೆ ಓದುತ್ತೇವೆ–

**“ಏಕೆಂದರೆ ದೇವರು ಕ್ರಮವಿಲ್ಲದಿರುವ ದೇವರಲ್ಲ, ಅದರೆ ಸಮಾಧಾನಕ್ಕೆ ಕಾರಣನಾದ ದೇವರಾಗಿದ್ದಾನೆ.”**

ಹೌದು ! ಇದನ್ನು ನಮ್ಮ ಮನಸ್ಸಿನಲ್ಲಿ ಯಾವಾಗಲೂ ಇಟ್ಟುಕೊಂಡಿರಬೇಕು ಏಕೆಂದರೆ ಇದೇ ರೀತಿಯ ವಿಷಯವನ್ನು ಹಳೆಯ ಒಡಂಬಡಿಕೆಯಲ್ಲಿ ಜ್ಞಾನಿಯಾದ ಬೋಧಕನು ವಿವಿರಿಸಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಪ್ರಸಂಗಿ 5:1-2

"ದೇವಸ್ಥಾನಕ್ಕೆ ಹೋಗುವಾಗ ನಿನ್ನ ಹೆಜ್ಜೆಯನ್ನು ಗಮನಿಸು. ಮೂಢರ ಯಜ್ಞಕ್ಕಿಂತ ಸಾನ್ನಿಧ್ಯಕ್ಕೆ ಬಂದು ಕಿವಿಗೊಡುವುದು ಲೇಸು. ತಾವು ತಪ್ಪು ಮಾಡುತ್ತಿದ್ದೇವೆಂಬುದು ಮೂಢರಿಗೆ ಗೊತ್ತೇ ಇಲ್ಲ. ನಿನ್ನ ಬಾಯಿಂದ ದುಡುಕಬೇಡ ಮತ್ತು ದೇವರ ಮುಂದೆ ಮಾತನಾಡಲು ನಿನ್ನ ಹೃದಯದಲ್ಲಿ ಆತುರಪಡಬೇಡ. ದೇವರು ಪರಲೋಕದಲ್ಲಿದ್ದಾನೆ. ನೀನು ಭೂಮಿಯಲ್ಲಿದ್ದಿ, ಆದಕಾರಣ ನಿನ್ನ ಮಾತುಗಳು ಕಡಿಮೆಯಾಗಿರಲಿ."



**ಹೌದು! ಒಬ್ಬ ವ್ಯಕ್ತಿಯು ದೇವರ ಸಮ್ಮುಖದಲ್ಲಿ (ಸನ್ನಿಧಾನದಲ್ಲಿ) ಬಹಳ ಎಚ್ಚರಿಕೆಯಿಂದಿರಬೇಕು !!**

ದೊಡ್ಡ ಗುಂಪಲ್ಲಿ **ಒಟ್ಟಿಗೆ** ಸೇರಿ ಅನ್ಯಭಾಷೆಯನ್ನಾಡುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಇದಲ್ಲದೆ ಇದರಿಂದ ಬಹಳ ಶಬ್ಧ ಮತ್ತು ಗಲಿಬಿಲಿಯೂ ಸಹ ಉಂಟಾಗುತ್ತದೆ !!

ಇದಲ್ಲದೆ ಸತ್ಯವೇದದಲ್ಲಿ ಈ "**ಅನ್ಯಭಾಷೆ**" ಯ "**ವರ**" ಗಳನ್ನು ಕುರಿತು ಏನೋ ಮುಖ್ಯವಾದ ವಿಷಯವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

1 ಕೊರಿಂಥದವರಿಗೆ 13:8

"(ಅನ್ಯ) ಭಾಷೆಗಳೋ ನಿಂತು ಹೋಗುವವು...."

ಆದ್ದರಿಂದ ಸತ್ಯವೇದವು ನಮಗೆ ಹೇಳುವುದೇನೆಂದರೆ ಈ ಶಕ್ತಿ ಅಥವಾ ಪವಿತ್ರಾತ್ಮ "ವ್ಯಕ್ತ" ವಾಗುವುದು ನಂತರದಲ್ಲಿ ಸತ್ತು ಹೋಗುತ್ತದೆ ಮತ್ತು ಮೊತ್ತವಾಗಿ "**ನಿಂತು**"ಹೋಗುತ್ತದೆ!!

## ಹೀಗೇಕೆ?

ಏಕೆಂದರೆ ಪವಿತ್ರಾತ್ಮನ **"ವರವು" ಅಪೋಸ್ತಲರ ಮೂಲಕವಾಗಿ** ಮಾತ್ರ ಇನ್ನೊಬ್ಬರಿಗೆ ವರ್ಗಾವಣೆಯಾಗುತ್ತಿತ್ತು ಎಂದು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ.

**ಅ.ಕೃ. 10:44,46** - "ಪೇತ್ರನು, ಈ ವಾಕ್ಯಗಳನ್ನು ಇನ್ನೂ ಹೇಳುತ್ತಿರುವಾಗಲೇ, ಅವನ ವಾಕ್ಯಗಳನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮನು ಇಳಿದನು. - ಅನ್ಯಜನಗಳಿಗೂ ಪವಿತ್ರಾತ್ಮನ ದಾನವಾಯಿತಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು."

ಮತ್ತೆ ಇದನ್ನೇ ನಾವು ಹೀಗೆ ಓದುತ್ತೇವೆ.

**ಅ.ಕೃ. 8:14-17**


"ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ, ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆಮಾಡಿದರು. ಏಕೆಂದರೆ ಪವಿತ್ರಾತ್ಮವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮವರವನ್ನು ಹೊಂದಿದರು."



ಮತ್ತೆ ಇದನ್ನೇ ನಾವು ಹೀಗೆ ಓದುತ್ತೇವೆ –

ಅ.ಕೃ. 19:6 - "ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮನು ಅವರ ಮೇಲೆ ಇಳಿದುಬಂದನು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು."

**ಹೌದು ! ಇದು ಬಹಳ ಸ್ಪಷ್ಟವಾಗಿದೆಯಲ್ಲವೆ !! ?**

ಆದ್ದರಿಂದ, ಎಲ್ಲಾ ಅಪೋಸ್ತಲರ ಮರಣದೊಂದಿಗೆ ಈ ಪವಿತ್ರಾತ್ಮನ "ವರವು"  "ನಿಂತು ಹೋಯಿತು" !!

## ಈಗ ಏಕೆ ಈ ಅನ್ಯಭಾಷೆಗಳನ್ನಾಡುವ "ವರವು" ಆದಿ ಸಭೆಗೆ ಮಾತ್ರ ಕೊಡಲಾಯಿತು?

ಏಕೆಂದರೆ "ಶಿಶು" ವಾಗಿದ್ದ ಆದಿ ಸಭೆಯ ಸ್ಥಾಪನೆಯ ಕೆಲಸವು **ಎರಡು** ಉದ್ದೇಶಗಳನ್ನು ನೆರವೇರಿಸಬೇಕಾಗಿತ್ತು.

**1.** ಕರ್ತನ ಮಹಾ ಆಯೋಗವನ್ನು (ಕೆಲಸವನ್ನು) ನೆರವೇರಿಸುವುದಕ್ಕಾಗಿ

**ಮತ್ತಾಯ 28:19**

**"ನೀವು ಹೋಗಿ ಎಲ್ಲಾ ಜನಾಂಗಗಳಿಗೆ ಬೋಧಿಸಿ"**



ಹೌದು! ಸುವಾರ್ತೆಯನ್ನು ಎಲ್ಲಾ ದೇಶಗಳಿಗೆ ಅವರವರ ಭಾಷೆಗಳಲ್ಲಿ ಬೋಧಿಸುವ ಅವಶ್ಯವಿತ್ತು ಮತ್ತು ಅಪೋಸ್ತಲರು ಮತ್ತು ಶಿಷ್ಯರಿಗೆ ಇಬ್ರಿಯ ಮತ್ತು ಅರಾಮಿಕ್ ಭಾಷೆಯ ಜ್ಞಾನ ಮಾತ್ರ ಇತ್ತು!.



**2.** ಆದಿಸಭೆಯ ಕಾಲದಲ್ಲಿ ಇನ್ನೂ ಹೊಸ ಒಡಂಬಡಿಕೆಯ ಪುಸ್ತಕಗಳು ಬರೆಯದೆ ಇದ್ದ ಕಾರಣ ದೇವರು **“ಅನ್ಯಭಾಷೆ ಮಾತನ್ನಾಡುವುದನ್ನು”** **“ಕಾಲುವೆ”**ಯಾಗಿ ದೈವಿಕ ಪ್ರಕಟಣೆಗಳನ್ನು ಬೋಧಿಸಲು ಮತ್ತು ಮಾರ್ಗದರ್ಶನ ನೀಡಲು ಉಪಯೋಗಿಸಿದನು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 14:6 - "ಆದರೆ ಸಹೋದರರೇ, ನಾನು ನಿಮ್ಮ ಬಳಿಗೆ ಬಂದು ದೇವರು ತಿಳಿಸಿದ್ದನ್ನು ಪ್ರಕಟಿಸದೆ, ಜ್ಞಾನವಾಕ್ಯಗಳನ್ನಾಡದೆ, ಪ್ರವಾದನೆಯನ್ನು ಹೇಳದೆ, ಉಪದೇಶಮಾಡದೆ, ಅನ್ಯಭಾಷೆಗಳನ್ನು ಮಾತ್ರ ಮಾತನಾಡುವವನಾಗಿದ್ದರೆ ನನ್ನಿಂದ ನಿಮಗೇನು ಪ್ರಯೋಜನವಾದೀತು?"**

**ಅಗೋ ! ಅದು ಬಹಳ ಸ್ಪಷ್ಟವಾಗಿ ಕೊಟ್ಟಿದೆಯಲ್ಲವೆ ! ?**

**ಹಾಗಾದ್ರೆ ಈ ದಿನಗಳಲ್ಲಿ “ಮಾತನಾಡುವ ಅನ್ಯಭಾಷೆಯನ್ನು ಕುರಿತು ಏನು ಹೇಳೋಣ??**

ಉತ್ತರಕ್ಕಾಗಿ ಕೆಳಗಿನ ಅಂಶಗಳನ್ನು ದಯವಿಟ್ಟು ಎಚ್ಚರಿಕೆಯಿಂದ ಪರಿಗಣಿಸಿರಿ

- ಅಪೋಸ್ತಲರು ತಲೆಯ ಮೇಲೆ ಕೈಗಳನಿಟ್ಟು ಪ್ರಾರ್ಥಿಸುವಾಗ ಮಾತ್ರ ವರ್ಗಾವಣೆಯಾಗುತ್ತಿದ್ದ “ವರವು” **ಹೇಗೆ** ಇದ್ದಕ್ಕಿದ್ದಂತೆ 1700 ವರ್ಷಗಳ ನಂತರ ಮತ್ತೆ ಕಾಣಿಸಿಕೊಳ್ಳಲು ಸಾಧ್ಯ?

- ಸತ್ಯವೇದ ವಾಕ್ಯದ 1 ಕೊರಿಂಥದವರಿಗೆ 14:28 ರಲ್ಲಿ ಅನ್ಯಭಾಷೆಯನ್ನಾಡಿದಾಗ ಅದರ **ಅರ್ಥವನ್ನು ಹೇಳುವವರಿಲ್ಲದಾಗ** ಆ ವಾಕ್ಯಕ್ಕೆ ಅವಿಧೇಯರಾಗುವುದು ಏಕೆ ?

ಏಕೆ ಎಲ್ಲರೂ ಒಟ್ಟಿಗೆ ಅನ್ಯಭಾಷೆಯನ್ನಾಡುತ್ತಾರೆ ಮತ್ತು **"ಮೂವರಿಗಿಂತ ಹೆಚ್ಚಿಲ್ಲದೆ" "ಒಬ್ಬೊಬ್ಬರಾಗಿ"** ಮಾತನ್ನಾಡಬೇಕು ಎಂಬ 1 ಕೊರಿಂಥದವರಿಗೆ 14: 27 ವಾಕ್ಯವನ್ನು ಏಕೆ ಕೈಗೊಳ್ಳುವುದಿಲ್ಲ?

ಪಂಚಶತ್ತಮ ದಿನಗಳಲ್ಲಿ ನಡೆದಂತೆ ಈ ದಿನಗಳಲ್ಲಿ ಅನ್ಯಭಾಷೆಯು ನಂಬದವರಿಗೆ ಗುರುತಾಗಿ ಎಂದಿಗೂ ಇಲ್ಲದೆ ಇರುವುದು ಏಕೆ ? (ಅಪೋಸ್ತಲರ ಕೃತ್ಯಗಳು 2:7,8)

ಈ ದಿನಗಳಲ್ಲಿ "ಅನ್ಯಭಾಷೆಗಳನ್ನಾಡುವವರ ಬೋಧನೆಗಳನ್ನು **ಪರಿಶೀಲಿಸಿರಿ** ಮತ್ತು ಅವರ ಬೋಧನೆಗಳು ಸತ್ಯವೇದದ ಪ್ರಕಾರ ಇದೆಯೆ ಮತ್ತು – **"ಅತಿಪರಿಶುದ್ಧವಾದ ನಂಬಿಕೆ"** ಯ ಪ್ರಕಾರ ಇದೆಯೆ ಎಂದು ಪರಿಶೀಲಿಸಿ ನೋಡಿರಿ. (ಯೂದನು : 20)

**ಉದಾಹರಣೆ: ಬೋಧನೆಗಳು ಮತ್ತು ಉಪದೇಶಗಳಾದ ಆತ್ಮ, ನರಕ, ತ್ರೈಯೇಕತ್ವ ಇತರೆ, ಇತರೆ.**

**.... ಮತ್ತು ಈ ವಿಷಯಗಳನ್ನು ಕುರಿತು ನಿಮಗೆ "ಸತ್ಯ" ಏನೆಂದು ತಿಳಿಯುವುದು ಮತ್ತು ನಿಜವಾಗಿಯೂ ಅದು - "ನಿಮ್ಮನ್ನು ಬಿಡುಗಡೆ ಮಾಡುವುದು" (ಯೋಹಾನ 8:32)**

ಈಗ ನಾವು ಪವಿತ್ರಾತ್ಮನ ಇನ್ನೊಂದು ವರವನ್ನು ಕುರಿತು ನೋಡೋಣ.

## ಅದ್ಭುತಗಳು / ಗುಣ ಹೊಂದುವಿಕೆಗಳು

ಇದು ರೋಗಗಳನ್ನು ಗುಣಪಡಿಸುವುದಕ್ಕಾಗಿ ದೇವರು ಪ್ರಯೋಗಿಸುವ "ಬಲ"ವಾಗಿದೆ.

- ಶರೀರ ಮತ್ತು ಮನಸ್ಸು (ಬುದ್ಧಿ) ಎರಡೂ
- ಮತ್ತು ದೆವ್ವದ ವಶದಿಂದ ಬಿಡುಗಡೆ
- ಮತ್ತು ಸತ್ತವರನ್ನು ಜೀವಂತವಾಗಿ ಎಬ್ಬಿಸುವುದು

ಈ ಪವಿತ್ರಾತ್ಮನ "ವರ" ವನ್ನು ಆದಿಸಭೆಗಳಲ್ಲಿ ಅಪೋಸ್ತಲರು ಮತ್ತು ಶಿಷ್ಯರು ಪ್ರಯೋಗಿಸುತ್ತಿದ್ದರು.
ಈಗ ಕೆಲವು ಉದಾಹರಣೆಗಳನ್ನು ಕುರಿತು ಓದೋಣ.



**ಅ.ಕೃ. 5:15-16** - "ಹೀಗಿರುವುದರಿಂದ ಜನರು ರೋಗಿಗಳನ್ನು ದೋಲಿಗಳ ಮೇಲೆಯೂ, ಹಾಸಿಗೆಗಳ ಮೇಲೆಯೂ ಇಟ್ಟು ಪೇತ್ರನು ಹಾದು ಹೋಗುವಾಗ, ಅವನ ನೆರಳಾದರೂ ಕೆಲವರ ಮೇಲಾದರೂ ಬೀಳಲಿ ಎಂದು ಅವರನ್ನು ಬೀದಿಗೆ ತೆಗೆದುಕೊಂಡು ಬರುತ್ತಿದ್ದರು. ಯೆರೂಸಲೇಮಿನ ಸುತ್ತಮುತ್ತಲಿನ ಊರುಗಳ ಜನರು ಸಹ ರೋಗಿಗಳನ್ನೂ, ದೆವ್ವ ಪೀಡಿತರನ್ನು ಹೊತ್ತುಕೊಂಡು ಗುಂಪುಗುಂಪಾಗಿ ಬರುತ್ತಿದ್ದರು; ಅವರೆಲ್ಲರೂ ಗುಣಮುಖರಾಗುತ್ತಿದ್ದರು."

**ಅ.ಕೃ. 6:8** - "ಸ್ತೆಫನನು ದೇವರ ಕೃಪೆಯಿಂದಲೂ, ಬಲದಿಂದಲೂ ತುಂಬಿದವನಾಗಿ ಜನರಲ್ಲಿ ಮಹಾ ಅದ್ಭುತ ಕಾರ್ಯಗಳನ್ನೂ, ಸೂಚಕಕಾರ್ಯಗಳನ್ನೂ ಮಾಡುತ್ತಾ ಇದ್ದನು."

**ಅ.ಕೃ. 9:40** - "ಪೇತ್ರನು ಅವರೆಲ್ಲರನ್ನು ಹೊರಕ್ಕೆ ಕಳುಹಿಸಿ, ಮೊಣಕಾಲೂರಿ ಪ್ರಾರ್ಥನೆಮಾಡಿ ಶವದ ಕಡೆಗೆ ತಿರುಗಿಕೊಂಡು; "ತಬಿಥಾ, ಎದ್ದೇಳು" ಅಂದನು. ಆಕೆಯು ಕಣ್ಣು ತೆರೆದು ಪೇತ್ರನನ್ನು ನೋಡಿ ಎದ್ದು ಕುಳಿತುಕೊಂಡಳು."

**ಅ.ಕೃ. 19:11-12** - "ದೇವರು ಪೌಲನ ಕೈಯಿಂದ ವಿಶೇಷವಾದ ಮಹತ್ಕಾರ್ಯಗಳನ್ನು ನಡಿಸುತ್ತಾ ಇದ್ದುದರಿಂದ, ಜನರು ಅವನ ಮೈಮೇಲಿನಿಂದ ಕೈವಸ್ತ್ರಗಳನ್ನೂ, ರುಮಾಲುಗಳನ್ನೂ ತಂದು ರೋಗಿಗಳ ಮೇಲೆ ಹಾಕಲು ಅವರ ರೋಗಗಳು ವಾಸಿಯಾದವು, ದುರಾತ್ಮಗಳೂ ಬಿಟ್ಟುಹೋದವು."


ಇವೆಲ್ಲಾ ವಾಕ್ಯಗಳು ಆದಿಸಭೆಯಲ್ಲಿ ಅಪೋಸ್ತಲರು ಮತ್ತು ಶಿಷ್ಯರ ಕೈಗಳಲ್ಲಿ ಪವಿತ್ರಾತ್ಮನ "ವರ" ಗಳ ಮೂಲಕ ನಡೆದ ಗುಣಹೊಂದುವಿಕೆ ಮತ್ತು ಅದ್ಭುತಗಳ ಪುರಾವೆ (ಸಾಕ್ಷಿ) ಗಳಾಗಿವೆ.

ಆದರೆ ಈ ಅಪೋಸ್ತಲರು ಮತ್ತು ಶಿಷ್ಯರ ಮೂಲಕ ವ್ಯಕ್ತವಾದ ಈ "ಗುಣ

ಹೊಂದುವಿಕೆಗಳು" ಮತ್ತು "ಅದ್ಭುತಗಳು" ವಿಷಯದಲ್ಲಿ ಒಂದು ಮುಖ್ಯವಾದ ವಿಷಯವನ್ನು ಗಮನಿಸಬೇಕು.

**ಹೌದು! ಇದನ್ನು ಯಾವಾಗಲೂ ... ನಂಬಿಕೆ ಇಲ್ಲದವರು ಮತ್ತು ಸಾಮಾನ್ಯ ಜನರ ಮೇಲೆ ಮಾತ್ರ ಉಪಯೋಗಿಸಲಾಗುತ್ತಿತ್ತು ಮತ್ತು ಎಂದಿಗೂ ಸ್ವತಃ ಕ್ರೈಸ್ತ ನಂಬಿಕೆಯುಳ್ಳವರ ಮೇಲೆ ಪ್ರಯೋಗಿಸುತ್ತಿರಲಿಲ್ಲ!!**

ಆಹ್, ಹೌದು ! ಆದಿಸಭೆಯ ಅಪೋಸ್ತಲರು ಮತ್ತು ಶಿಶ್ಯರು ಅತ್ಯವಶ್ಯಕವಾದ ಸಮಯಗಳಲ್ಲಿಯೂ ಸಹ ಈ "ಬಲ" ವನ್ನು ತಮ್ಮ ಮೇಲೆ ಎಂದಿಗೂ ಪ್ರಯೋಗ ಮಾಡಲಿಲ್ಲ ಎಂದು ಕೆಳಗಿನ ವಾಕ್ಯದಲ್ಲಿ ನೋಡಬಹುದು.



**1 ತಿಮೊಥೆಯನಿಗೆ 5:23**

**"ಇನ್ನು ಮೇಲೆ ನೀರನ್ನು ಮಾತ್ರ ಕುಡಿಯುವವನಾಗಿರದೆ, ನಿನ್ನ ಅಜೀರ್ಣದ ಮತ್ತು ನಿನಗೆ ಆಗಾಗ್ಗೆ ಉಂಟಾಗುವ ಅಸ್ವಸ್ಥತೆಯ ಪರಿಹಾರಕ್ಕಾಗಿ ದ್ರಾಕ್ಷಾರಸವನ್ನು ಸ್ವಲ್ಪವಾಗಿ ತೆಗೆದುಕೊ."**

ಇದು ತಿಮೊಥೆಯನಿಗೆ ಅಪೋಸ್ತಲನಾದ ಪೌಲನ ಬರವಣಿಗೆಯಾಗಿದ್ದು, ತನ್ನ ಹೊಟ್ಟೆ ನೋವಿಗಾಗಿ "ಸ್ವಲ್ಪ ದ್ರಾಕ್ಷಾರಸ"ವನ್ನು ಔಷಧಿಯ ರೀತಿಯಲ್ಲಿ ತೆಗೆದುಕೊಳ್ಳುವಂತೆ ಸಲಹೆ ನೀಡುತ್ತಾನೆ. ಇದು ಸಾಮಾನ್ಯ ರೀತಿಯಾದ ಗುಣ ಹೊಂದುವಿಕೆಯಾಗಿದೆ.

ಆದರೆ ದಯವಿಟ್ಟು ಗಮನಿಸಿ, ಆತನು

ತಿಮೊಥೆಯನ ಮೇಲೆ ಕೈಯನಿಟ್ಟು ಅದ್ಭುತವಾಗಿ ಗುಣ ಹೊಂದುವುದಕ್ಕೆ ಯಾವ ಪ್ರಯಾಸವನ್ನು ಪಡಲಿಲ್ಲ.

ಇದಲ್ಲದೆ ಆತನು ಬೇರೆಯವರಿಗೆ ಗುಣ ಹೊಂದುವ ಹಾಗೆ ಮಾಡಿದಂತೆ ತನ್ನ "**ಕೈವಸ್ತ್ರ**"ವನ್ನು ಆತನಿಗೆ ಕಳುಹಿಸಲಿಲ್ಲ ಎಂದು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಅಪೋಸ್ತಲರ ಕೃತ್ಯಗಳು 19 : 12**

**"ಜನರು ಅವನ ಮೈಮೇಲಿನಿಂದ ಕೈವಸ್ತ್ರಗಳನ್ನೂ, ರುಮಾಲುಗಳನ್ನೂ ತಂದು ರೋಗಿಗಳ ಮೇಲೆ ಹಾಕಲು ಅವರ ರೋಗಗಳು ವಾಸಿಯಾದವು, ದುರಾತ್ಮಗಳೂ ಬಿಟ್ಟುಹೋದವು."**

## ಹೀಗೇಕೆ ??

ಈ ದಿನಗಳಲ್ಲಿ **ಅನೇಕ** ಕ್ರೈಸ್ತರಿಗೆ ಯಾವುದೇ ಆರೋಗ್ಯದ ತೊಂದರೆ ಅಥವಾ ಶರೀರದಲ್ಲಿ ವ್ಯಾಧಿ ಅಥವಾ ಮನಸ್ಸಿನಲ್ಲಿ ಇದ್ದರೂ ಅದ್ಭುತವಾಗಿ ಗುಣಪಡಿಸಲು ಸದಾ ಸಿದ್ಧರಾಗಿದ್ದಾರೆ !!

**ಅದು ಹೇಗೆ ಬರುತ್ತದೆ ಎಂಬ ವಿಷಯವೂ ಅವಶ್ಯವಿಲ್ಲ !**

## ಆದಿಸಭೆಯಲ್ಲಿನ ಸನ್ನಿವೇಶವು ಎಷ್ಟು ವ್ಯತ್ಯಾಸವಾಗಿತ್ತು !!

ಆದ್ದರಿಂದ ಆದಿ ಸಭೆಯ ಕ್ರೈಸ್ತರಿಗೆ ಏನು ಮನವರಿಕೆಯಾಗಿತ್ತೆಂದರೆ ಅದ್ಭುತ ಕ್ರಿಯೆಗಳನ್ನು ನಡೆಸುವ "ಶಕ್ತಿ"ಯನ್ನು

.... ನಂಬಿಕೆ ಇಲ್ಲದವರಿಗೆ "ಸೂಚನೆ"ಯಾಗಿ ಮಾಡಬೇಕು ಮತ್ತು

....ತಮ್ಮ ಮೇಲೆ ಅಥವಾ ತಮಗಾಗಿ ಉಪಯೋಗಿಸಬಾರದು ಎಂದು ಮನವರಿಕೆಯಾಗಿತ್ತೆಂದು ನಮಗೆ ಗೊತ್ತಾಗುತ್ತದೆ!

## ಈ ದಿನಗಳಲ್ಲಿ ಗುಣಹೊಂದುವಿಕೆ ಮತ್ತು ಅದ್ಭುತಗಳ ಉದ್ದೇಶವು ಎಷ್ಟು ವ್ಯತ್ಯಾಸವಾಗಿವೆ !!


ಇನ್ನೂ ನಾವು ನೋಡುವುದೇನೆಂದರೆ, ಈ ದಿನಗಳಲ್ಲಿ ಸತ್ಯವೇದ ವಾಕ್ಯವನ್ನು **ಮಿತವಾಗಿ ಕುಡಿಯುವುದಕ್ಕೆ (ಮಧ್ಯಪಾನ) ಪರವಾನಗಿಯಾಗಿ (ಲೈಸನ್ಸ್) ಉಪಯೋಗಿಸುತ್ತಾರೆ.**

ಮತ್ತು ಅಪೋಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಈ ವಾಕ್ಯದಲ್ಲಿ ಏನು ಹೇಳುತ್ತಿದ್ದಾನೆಂದು ಅರ್ಥ ಮಾಡಿಕೊಳ್ಳದೆ ಅನೇಕ ಕ್ರೈಸ್ತರು **ಪ್ರತಿದಿನ** "ಸ್ವಲ್ಪ" ಮಧ್ಯಪಾನವನ್ನು ಕುಡಿಯುತ್ತಿದ್ದಾರೆ !

ಏಕೆಂದರೆ ಇಲ್ಲಿ, **ಬಹಳ ಸ್ಪಷ್ಟ** ವಾಗಿರುವುದೇನೆಂದರೆ, ಅಪೋಸ್ತಲನ ಇಲ್ಲಿ ಸೂಚಿಸಿರುವ "ಸ್ವಲ್ಪ ದ್ರಾಕ್ಷಾರಸವು" ಕೇವಲ ಔಷಧಿಯ ಉಪಯೋಗಕ್ಕಾಗಿ ಮತ್ತು ತಿಮೊಥೆಯನ ಹೊಟ್ಟೆನೋವವನ್ನು ಗುಣಪಡಿಸುವುದಕ್ಕಾಗಿ ಮಾತ್ರ ಎಂದು ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**"ನಿನ್ನ ಹೊಟ್ಟೆಯ ನಿಮಿತ್ತವಾಗಿಯೂ ನಿನಗೆ ಆಗಾಗ್ಗೆ ಉಂಟಾಗುವ ಬಲಹೀನತೆಗಳಿಗಾಗಿಯೂ ದಾಕ್ಷಾರಸವನ್ನು ಸ್ವಲ್ಪವಾಗಿ ತೆಗೆದುಕೋ"**

ನಂತರ ಬೇರೆ ಎರಡು ಸನ್ನಿವೇಶದಲ್ಲಿ ಅಪೋಸ್ತಲರಾದ ಪೌಲನು ಮತ್ತು ಪೇತ್ರನು ಇಬ್ಬರು, ಸತ್ತವರನ್ನು ಜೀವಂತವಾಗಿ ಎಬ್ಬಿಸಿದರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಅಪೋಸ್ತಲರ ಕೃತ್ಯಗಳು 9:36-42**

**"ಯೊಪ್ಪ ಪಟ್ಟಣದಲ್ಲಿ ತಬಿಥಾ ಎಂಬ ಒಬ್ಬ ಶಿಷ್ಯಳಿದ್ದಳು. ಆ ಹೆಸರಿಗೆ ಗ್ರೀಕ್ ಭಾಷೆಯಲ್ಲಿ "ದೊರ್ಕ" ಅಂದರೆ ಜಿಂಕೆ ಎಂದರ್ಥ. ಆಕೆಯು ಸತ್ಕ್ರಿಯೆಗಳನ್ನೂ, ದಾನಧರ್ಮಗಳನ್ನೂ ಬಹಳವಾಗಿ ಮಾಡುತ್ತಿದ್ದಳು. ಆ ಕಾಲದಲ್ಲಿ ಆಕೆ ರೋಗಕ್ಕೆ ತುತ್ತಾಗಿ ಸತ್ತಳು. ಆಕೆಯ ಶವವನ್ನು ಸ್ನಾನಮಾಡಿಸಿ ಮೇಲಂತಸ್ತಿನಲ್ಲಿಟ್ಟರು. ಯೊಪ್ಪಕ್ಕೆ ಲುದ್ದವು ಹತ್ತಿರವಾಗಿರಲಾಗಿ ಪೇತ್ರನು ಅಲ್ಲಿ ಇದ್ದಾನೆಂದು ಶಿಷ್ಯರು ಕೇಳಿ ಇಬ್ಬರು ಮನುಷ್ಯರನ್ನು ಅವನ ಬಳಿಗೆ ಕಳುಹಿಸಿ, "ತಡಮಾಡದೆ ನಮ್ಮ ಹತ್ತಿರಕ್ಕೆ ಬರಬೇಕೆಂದು" ಬೇಡಿಕೊಂಡರು. ಪೇತ್ರನು**


ಎದ್ದು ಅವರ ಜೊತೆಯಲ್ಲಿ ಹೋದನು. ಅವನು ಬಂದ ಕೂಡಲೆ ಅವರು ಅವನನ್ನು ಮೇಲಂತಸ್ತಿಗೆ ಕರೆದುಕೊಂಡು ಹೋದರು. ಅಲ್ಲಿ ವಿಧವೆಯರೆಲ್ಲ ಅಳುತ್ತಾ, ಅವನ ಹತ್ತಿರ ನಿಂತುಕೊಂಡು ದೊರ್ಕಳು ತಮ್ಮ ಸಂಗಡ ಇದ್ದಾಗ ಮಾಡಿಕೊಟ್ಟಿದ್ದ ಒಳಂಗಿಗಳನ್ನೂ, ಮೇಲಂಗಿಗಳನ್ನೂ ತೋರಿಸಿದರು. ಪೇತ್ರನು ಅವರೆಲ್ಲರನ್ನು ಹೊರಕ್ಕೆ ಕಳುಹಿಸಿ, ಮೊಣಕಾಲೂರಿ ಪ್ರಾರ್ಥನೆಮಾಡಿ ಶವದ ಕಡೆಗೆ ತಿರುಗಿಕೊಂಡು; "ತಬಿಥಾ, ಎದ್ದೇಳು" ಅಂದನು. ಆಕೆಯು ಕಣ್ಣು ತೆರೆದು ಪೇತ್ರನನ್ನು ನೋಡಿ ಎದ್ದು ಕುಳಿತುಕೊಂಡಳು. ಅವನು ಆಕೆಯನ್ನು ಕೈಹಿಡಿದು ಎಬ್ಬಿಸಿ, ಅಲ್ಲಿದ್ದ ವಿಧವೆಯರನ್ನು ಮತ್ತು ದೇವಜನರನ್ನೂ ಕರೆದು, ಜೀವಿತಳಾದ ಆಕೆಯನ್ನು ಅವರೆದುರಿಗೆ ನಿಲ್ಲಿಸಿದನು. ಈ ಸಂಗತಿಯು ಯೊಪ್ಪದಲ್ಲೆಲ್ಲಾ ಹರಡಿ ಅನೇಕರು ಕರ್ತನ ಮೇಲೆ ನಂಬಿಕೆಯಿಟ್ಟರು."

ಇದು ಅಪೋಸ್ತಲನಾದ ಪೇತ್ರನು ಮಾಡಿದ ಅದ್ಭುತ ಕಾರ್ಯ

ನಂತರ ನಾವು ಹೀಗೆ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 20: 9-12**

"ಯೂತಿಖನೆಂಬ ಒಬ್ಬ ಯೌವನಸ್ಥನು ಕಿಟಿಕಿಯ ಹೊಸ್ತಿಲಿನಲ್ಲಿ ಕುಳಿತುಕೊಂಡು ಗಾಢನಿದ್ರೆಯಿಂದ ತೂಕಡಿಸುತ್ತಿದ್ದನು. ಪೌಲನು ಇನ್ನೂ ಬೋಧನೆ ಮಾಡುತ್ತಾ ಇದ್ದಾಗ ಆ ಯೌವನಸ್ಥನು ಗಾಢವಾದ ನಿದ್ರೆಯಿಂದ ತೂಕಡಿಸಿ ಮೂರನೆಯ ಅಂತಸ್ತಿನಿಂದ ಕೆಳಕ್ಕೆ ಬಿದ್ದುಬಿಟ್ಟನು; ಅವನನ್ನು ಎಬ್ಬಿಸಲು ಹೋದಾಗ ಅವನು ಸತ್ತುಹೋಗಿದ್ದನು. ಆದರೆ ಪೌಲನು ಇಳಿದು ಹೋಗಿ ಅವನ ಮೇಲೆ ಬಿದ್ದು ತಬ್ಬಿಕೊಂಡು; "ಗೋಳಾಡಬೇಡಿರಿ, ಅವನು ಜೀವಂತವಾಗಿದ್ದಾನೆ" ಎಂದು ಹೇಳಿದನು. ಆಗ ಅವನು ಮೇಲಕ್ಕೆ ಹೋಗಿ ರೊಟ್ಟಿ ಮುರಿದು ಊಟಮಾಡಿ ಬಹಳ ಹೊತ್ತು ಬೆಳಗಾಗುವ ತನಕ ಮಾತನಾಡಿ ಹೊರಟುಹೋದನು. ಅವರು ಜೀವಿತನಾದ ಆ ಹುಡುಗನನ್ನು ಕರೆದುಕೊಂಡು ಬರಲು ಅವರಿಗೆ ಬಹಳ ಸಮಾಧಾನವಾಯಿತು."



ಇದು ಅಪೋಸ್ತಲನಾದ ಪೌಲನು ಮಾಡಿದ ಅದ್ಭುತ ಕಾರ್ಯ.

ಇವೆಲ್ಲವನ್ನು ಕರ್ತನ ಬಲ ಮತ್ತು ಮಹಿಮೆಯನ್ನು ಸ್ಥಾಪಿಸುವುದಕ್ಕಾಗಿ ಮಾಡಲಾಗಿದೆ ಮತ್ತು ಸುವಾರ್ತಾ ಸಂದೇಶವನ್ನು ಕೇಳಿ ಅದರ ನಿಮಿತ್ತ

**...ಬಾಧೆಪಟ್ಟು ಮತ್ತು ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಯಜಮಾನನ ಹೆಜ್ಜೆಯ ಜಾಡನ್ನು ಹಿಂಬಾಲಿಸಲು ಹೀಗೆ ಮಾಡಲಾಗಿದೆ.**

ಮತ್ತು ಇದಲ್ಲದೆ, ಹೊಸ ಒಡಂಬಡಿಕೆಯ ಪುಸ್ತಕಗಳು ಮತ್ತು ನಾಲ್ಕು ಸುವಾರ್ತೆಗಳ ಪುಸ್ತಕಗಳು ಇನ್ನೂ ಬರೆದಿರಲಿಲ್ಲ !

**ಆದರೆ ಕೇವಲ ಅದ್ಭುತಗಳು ಮಾತ್ರ ನಂಬುವವರಾಗಲು ಅಥವಾ ಯೇಸುವಿನ ಹಿಂಬಾಲಕರಾಗಲು ಮೂಲಾಧಾರವಾಗಿರಲಿಲ್ಲ !!**

ಸ್ವತ: ಕರ್ತನು ತನ್ನ ಶಿಶ್ಯರಾಗಲು ಇಂತಹ ಜನರನ್ನು ಎದುರು ನೋಡಲಿಲ್ಲ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### ಯೋಹಾನ 2:23-25

**"ಆತನು ಪಸ್ಕಹಬ್ಬದ ಜಾತ್ರೆಯಲ್ಲಿ ಯೆರೂಸಲೇಮಿನಲ್ಲಿ ಇದ್ದಾಗ ಬಹು ಜನರು ಆತನು ಮಾಡಿದ ಸೂಚಕಕಾರ್ಯಗಳನ್ನು ನೋಡಿ ಆತನ ಹೆಸರಿನಲ್ಲಿ ನಂಬಿಕೆ ಇಟ್ಟರು. ಆದರೆ ಯೇಸು ಎಲ್ಲವನ್ನೂ ಬಲ್ಲವನಾದುದರಿಂದ ಅವರಿಗೆ ವಶವಾಗಲಿಲ್ಲ, ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾರೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಅಗತ್ಯವಿರಲಿಲ್ಲ."**

ಹೌದು! ಈ **"ಅದ್ಭುತವನ್ನಾಧರಿಸಿ"** ರುವ ನಂಬಿಕೆಯು ಯೇಸುವಿನ ಕಾಲದಲ್ಲಿ ಅನೇಕ ಜನರಿದ್ದರು ಮತ್ತು ಈಗಿನ ದಿನಗಳಲ್ಲಿಯೂ ಹಾಗೆಯೇ ಅನೇಕ ಜನರಿದ್ದಾರೆ.

ಆದರೆ ಕ್ರೈಸ್ತ ಜೀವನದ ಹಾದಿಯಲ್ಲಿ ಇದು ಆಧಾರಿತವಾಗಿ ಇರುವುದಿಲ್ಲ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### 2 ಕೊರಿಂಥದವರಿಗೆ 5:7

**"ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ"**

ಹೌದು ! ಇದು ಬಹಳ ಸ್ಪಷ್ಟವಾಗಿದೆ !!

ಸ್ವತ: ಕರ್ತನೇ ಅದ್ಭುತಗಳನ್ನು ಹುಡುಕುವ ಈ ರೀತಿಯಾದ ಕ್ರೈಸ್ತರನ್ನು ಕುರಿತು ಪ್ರವಾದನೆಯಲ್ಲಿ ಹೀಗೆ ಹೇಳಿದ್ದಾನೆ –

**ಮತ್ತಾ 7:22-23**

**"ಕರ್ತನೇ, ಕರ್ತನೇ, ನಿನ್ನ ಹೆಸರಿನಲ್ಲಿ ನಾವು ಪ್ರವಾದನೆ ಮಾಡಲಿಲ್ಲವೇ? ನಿನ್ನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ತೀರ್ಪಿನ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ, 'ನಿಮ್ಮ ಗುರುತೇ ನನಗಿಲ್ಲ; ದುಷ್ಟತನ ಮಾಡುವ ನೀವು, ನನ್ನಿಂದ ತೊಲಗಿಹೋಗಿರಿ,' ಎಂದು ಹೇಳಿಬಿಡುವೆನು."**

ಹೌದು ! ಇಲ್ಲಿ ಕರ್ತನು ವಿವರಿಸುವುದೇನೆಂದರೆ "**ಅನೇಕ**" ಕ್ರೈಸ್ತರು "**ಆ ದಿನದಲ್ಲಿ**" ಅಥವಾ ನ್ಯಾಯ ತೀರ್ಪಿನ ದಿನದಲ್ಲಿ ಕರ್ತನಾದ ಯೇಸುವಿನ ನಾಮದಲ್ಲಿ ದೊಡ್ಡ ಮತ್ತು ಅದ್ಭುತ ಕಾರ್ಯಗಳನ್ನು ಮಾಡಿದ್ದೇವೆ ಎನ್ನುತ್ತಾರೆ. ಆದರೆ ಸ್ವತ: ಕರ್ತನು ಹೀಗೆಂದು ಹೇಳುತ್ತಾನೆ

**"ದುಷ್ಟತನ ಮಾಡುವ ... ನಿಮ್ಮನ್ನು ಎಂದಿಗೂ ಅರಿಯೆನು"**

"**ಕರ್ತನೇ, ಕರ್ತನೇ**" ಎಂದು ಎರಡು ಸಾರಿ ಹೇಳಿರುವ ಪದಗಳು ಹೆಸರಿಗೆ ಮಾತ್ರ ಕ್ರೈಸ್ತರಲ್ಲಿರುವ **ಎರಡು** ಭಾಗಗಳಲ್ಲು ಸೂಚಿಸುತ್ತದೆ.

– **ರೋಮನ್ ಕಥೋಲಿಕ್‌ಗಳು**

ಮತ್ತು

– **ಪ್ರಾಟೆಸ್ಟಂಟ್‌ಗಳು**

**ಇಬ್ಬರೂ ಯೇಸುವಿನ ಹೆಸರಿನಲ್ಲಿ ಅದ್ಭುತಗಳನ್ನು ಮಾಡಿದ್ದೇವೆ ಎನ್ನುತ್ತಾರೆ !!**

ಆದರೆ ಕರ್ತನು ಅವರ ಗುರುತೇ ತನಗಿಲ್ಲ ಎಂದು ಹೇಳುತ್ತಾನೆ ಮತ್ತು ಆ ಮಹತ್ಕಾರ್ಯಗಳನ್ನು –

"... **ದುಷ್ಟತನ ಮಾಡು**"**ವವರು ಎಂದು ಸೂಚಿಸಿದ್ದಾನೆ.**

ಹೌದು ! ಯೇಸು ಈ ಅದ್ಭುತಗಳನ್ನು **ತನ್ನದೆಂದು** ಅಂಗೀಕರಿಸುವುದಿಲ್ಲ ...ಇದಲ್ಲದೆ ಅಂತಹ ಕ್ರೈಸ್ತರನ್ನು **ಆತನ ಸೇವಕರೆಂದು** ಅಂಗೀಕರಿಸುವುದಿಲ್ಲ !!!

## ಇದು ಹೀಗೇಕೆ ?
## "ಯೇಸುವಿನ ನಾಮದಲ್ಲಿ" ಮಾಡಿದ ಅದ್ಭುತಗಳು ಯೇಸುವಿನ ಬಲದಿಂದ ಮಾಡಿದ್ದಲ್ಲವೆ?

ಈ ಪ್ರಶ್ನೆಗೆ **ಉತ್ತರವನ್ನು** ಕುರಿತು ಯೇಸುವಿನ ಕಾಲದಲ್ಲಿ ಮಾಡಿದ ಅದ್ಭುತಗಳಿಗೆ ಇದ್ದ ಹಿನ್ನಲೆಯನ್ನು ಸತ್ಯವೇದವು ಏನು ಬೋಧಿಸುತ್ತದೆ

...ಮತ್ತು ಈ ದಿನಗಳಲ್ಲಿ ಮಾಡುವ ಅದ್ಭುತಗಳ ಹಿನ್ನೆಲೆಯನ್ನು ನೋಡುವಾಗ ತಿಳಿಯುತ್ತದೆ !!

ಈಗ ನಾವು ಕೆಳಗಿನ ವಾಕ್ಯವನ್ನು ನೋಡೋಣ –

### ಮಾರ್ಕ 9:38-40

"ಯೋಹಾನನು ಆತನಿಗೆ, "ಬೋಧಕನೇ, ಯಾರೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವ ಬಿಡಿಸುವುದನ್ನು ನಾವು ಕಂಡು ಅವನು ನಮ್ಮೊಂದಿಗೆ ಸೇರಿದವನಲ್ಲವಾದ್ದರಿಂದ ಅವನಿಗೆ ಅಡ್ಡಿಮಾಡಿದೆವು" ಎಂದು ಹೇಳಿದನು. ಅದಕ್ಕೆ ಯೇಸು, "ಅವನಿಗೆ ಅಡ್ಡಿಮಾಡಬೇಡಿರಿ; ನನ್ನ ಹೆಸರಿನಲ್ಲಿ ಮಹತ್ಕಾರ್ಯವನ್ನು ಮಾಡಿ ಏಕಾಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ. ನಮಗೆ ವಿರುದ್ಧವಾಗಿಲ್ಲದವನು ನಮ್ಮ ಪಕ್ಷದವನೇ."



ಹೌದು ! ಈ ಸನ್ನಿವೇಶವು ಶಿಶ್ಯರಲ್ಲಿ **ಒಬ್ಬನಲ್ಲದವನು,** ಮತ್ತು ತಮಗೆ ತಿಳಿಯದವನು **ಆಗಿದ್ದರೂ ಯೇಸುವಿನ ಹೆಸರಿನಲ್ಲಿ ಅದ್ಭುತ ಮಾಡುತ್ತಿದ್ದನು** ಈ ವಿಚಾರವನ್ನು ಕುರಿತು ಸತ್ಯವೇದಲ್ಲಿ ದಾಖಲಾಗಿದೆ ಹಾಗಿರುವಾಗ ಅಪೋಸ್ತಲರು ಅವನನ್ನು ಅಡ್ಡಿ ಮಾಡಿದರು. ಯೇಸು ಅವರಿಗೆ ಅದು ಪರವಾಗಿಲ್ಲ ಎಂದು ಹೇಳಿ ಹೀಗೆಂದನು

**"...ಅವನಿಗೆ ಅಡ್ಡಿ ಮಾಡಬೇಡಿರಿ, ಯಾಕೆಂದರೆ ನನ್ನ ಹೆಸರಿನಲ್ಲಿ ಅದ್ಭುತ ಕಾರ್ಯವನ್ನು ಮಾಡಿ ನನ್ನ ವಿಷಯದಲ್ಲಿ ಹಗುರವಾಗಿ ಕೆಟ್ಟದನ್ನು ಮಾತನಾಡುವ ಒಬ್ಬನಾದರೂ ಇಲ್ಲ."**

**ಅನೇಕರು ಈ ವಾಕ್ಯದಲ್ಲಿ ಆಧಾರವಾಗಿಟ್ಟುಕೊಂಡು ಅವರು ಈ ದಿನಗಳಲ್ಲಿ ಮಾಡುವ ಎಲ್ಲಾ ಅದ್ಭುತ ಕಾರ್ಯಗಳನ್ನು ಸಮರ್ಥಿಸಿಕೊಳ್ಳುತ್ತಾರೆ.**


**ಯೇಸುವಿನ ಅದೇ ವಾಕ್ಯಗಳು ಈ ದಿನಗಳಲ್ಲಿ ಅನ್ವಯಿಸುತ್ತದೆಯೇ?**

ಸ್ವತ: ಯೇಸುವೇ ಇದಕ್ಕೆ ಉತ್ತರ ನೀಡುತ್ತಾನೆ.

**ಮತ್ತಾ 24:24-25**

**"ಸುಳ್ಳು ಕ್ರಿಸ್ತರೂ, ಸುಳ್ಳುಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರು ಆರಿಸಿಕೊಂಡವರನ್ನು ಸಹ ಮೋಸಗೊಳಿಸುವುದಕ್ಕೋಸ್ಕರ ಮಹಾ ಸೂಚಕ ಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು. ನೋಡಿರಿ, ನಾನು ಮುಂಚಿತವಾಗಿಯೇ ನಿಮಗೆ ಇದನ್ನು ಹೇಳುತ್ತಿದ್ದೇನೆ."**

ಹೌದು ! ಈ ಸುವಾರ್ತಾ ಯುಗದಲ್ಲಿ ಬೆಳವಣಿಗೆ ಹೊಂದುವ ಕ್ರಿಸ್ತ ವಿರೋಧಿಯ ವ್ಯವಸ್ಥೆಯನ್ನು ಕುರಿತು ಯೇಸು ಎಚ್ಚರಿಸುತ್ತಾನೆ.



ಈ ವ್ಯವಸ್ಥೆಯು **"ಯೇಸುವಿನ ನಾಮದಲ್ಲಿ"** ಅನೇಕ ಅದ್ಭುತ ಕಾರ್ಯಗಳನ್ನು ಮಾಡುತ್ತಾರೆ ಮತ್ತು ಅನೇಕರನ್ನು ವಂಚಿಸುತ್ತಾರೆ !!

ಹೌದು ! **"ಸುಳ್ಳು ಕ್ರಿಸ್ತರು"** ಎಂದರೆ ಸುಳ್ಳು ಸಭೆಯ ವ್ಯವಸ್ಥೆಗಳನ್ನು ಸೂಚಿಸುತ್ತದೆ.

.....ಮತ್ತು **"ಸುಳ್ಳು ಪ್ರವಾದಿಗಳು"** ಎಂದರೆ ಆ ವ್ಯವಸ್ಥೆಗಳ ಸುಳ್ಳು ಬೋಧಕರನ್ನು ಸೂಚಿಸುತ್ತದೆ.

**ಹಾಗಾದರೆ ಒಬ್ಬ ವ್ಯಕ್ತಿಯು ಹೀಗೆ ಕೇಳಬಹುದು -**
**ಈ ಅದ್ಭುತಗಳನ್ನು "ಯೇಸುವಿನ ನಾಮದಲ್ಲಿ" ಯಾರು ಮಾಡುತ್ತಾರೆ ?**

ಅದಕ್ಕೆ ಉತ್ತರವನ್ನು ನಾವು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ

**2 ಕೊರಿಂಥದವರಿಗೆ 11:14**

"ಇದೇನೂ ಆಶ್ಚರ್ಯವಲ್ಲ; ಯಾಕೆಂದರೆ ಸೈತಾನನು ಬೆಳಕಿನ ದೂತನಂತೆ ಕಾಣಿಸಿಕೊಳ್ಳುವ ಹಾಗೆ ತನ್ನನ್ನು ತಾನೇ ಮಾರ್ಪಡಿಸಿಕೊಳ್ಳುತ್ತಾನೆ"

ಆಹ್ ! ಹೌದು ! ಇದು ಸೈತಾನನು

ಆತನು ಈ ಅದ್ಭುತ ಕಾರ್ಯಗಳನ್ನು – **".... ಬೆಳಕಿನ ದೂತನಂತೆ"** ಅಥವಾ **"ಬೇರೊಬ್ಬ ಯೇಸು"**ವಾಗಿ ದೂರ್ಪಟ್ಟು ಹೀಗೆ ಮಾಡುತ್ತಾನೆ. ( 2 ಕೊರಿಂಥದವರಿಗೆ 11:4) ಮತ್ತು ಈ ಅದ್ಭುತ ಕಾರ್ಯಗಳನ್ನು

**"ಬೇರೊಬ್ಬ ಯೇಸು"** ವಿನ **"ನಾಮದಲ್ಲಿ"** ಮತ್ತು **"ಬೇರೊಂದು ಆತ್ಮ"**ದ ಬಲದಿಂದ ಮಾಡುತ್ತಾನೆ.

ಮತ್ತು ...

**ಎಲ್ಲಾ ಕ್ರೈಸ್ತರು ವಂಚನೆಗೊಳಗಾಗುತ್ತಾರೆ ಮತ್ತು ಇದು "... ದೇವರ ಚಿತ್ತ" ವೆಂದು ಅಂದುಕೊಳ್ಳುತ್ತಾರೆ**

**ಏಕೆಂದರೆ ಸತ್ಯವೇದದ – ದೇವರ ವಾಕ್ಯದ ತಿಳುವಳಿಕೆಯಲ್ಲಿ ಕೊರತೆಯುಳ್ಳವರಾಗಿರುವದೇ ಇದಕ್ಕೆ ಕಾರಣವಾಗಿದೆ**
**(ಹೋಶೇಯ 4:6)**

ಈ ನಿಜಾಂಶವನ್ನು ಇನ್ನೂ ಕೆಳಗಿನ ವಾಕ್ಯದಲ್ಲಿ ದೃಢೀಕರಿಸಲಾಗಿದೆ.

**2 ಥೆಸಲೋನಿಕದವರಿಗೆ 2:9** - "ಆ ಕೆಡುಕನ ಬರುವಿಕೆಯು ಸೈತಾನನ


**ಕಾರ್ಯಕ್ಕನುಸಾರವಾಗಿರುವುದು; ಅದು ಎಲ್ಲಾ ಶಕ್ತಿಯಿಂದಲೂ ಸೂಚಕ ಕಾರ್ಯಗಳಿಂದಲು ಸುಳ್ಳಾದ ಅದ್ಭುತ ಕಾರ್ಯಗಳಿಂದಲೂ ..."**

ಹೌದು ! ಸೈತಾನನು ಈ ಅಧ್ಭುತ ಕಾರ್ಯಗಳಲ್ಲಿ ತನ್ನ **"ಎಲ್ಲಾ ಶಕ್ತಿ"**ಯನ್ನು ವ್ಯಕ್ತಪಡಿಸುವನೆಂದು ನಾವು ಓದುತ್ತೇವೆ !

**ಆದರೆ ಇಲ್ಲಿ ಕೊಟ್ಟಿರುವ "ಸುಳ್ಳಾದ ಅದ್ಭುತ ಕಾರ್ಯಗಳಲ್ಲಿ" ಇರುವ "ಸುಳ್ಳು" ಯಾವುದು ?**

ಈ ಅದ್ಭುತಗಳು ಮಾಡುವಾಗ ಉಪಯೋಗಿಸುವ ಯೇಸುವಿನ ನಾಮವು ಸುಳ್ಳಾಗಿದೆ ನಿಜವಾಗಿಯೂ ಅದ್ಭುತಗಳಲ್ಲಿ ವ್ಯಕ್ತವಾಗುವ **"ಶಕ್ತಿಯು"**....

**...ಯೇಸುವಿನಿಂದ ಬಂದದ್ದು ಅಲ್ಲ !**



**ನಂತರ ... ನಾವು ಏನು ಓದುತ್ತೇವೆ ?**

ಹೌದು! 2 ಥೆಸಲೋನಿಕದವರಿಗೆ 2ನೇ ಅಧ್ಯಾಯ ವಾಕ್ಯ 10 ಮತ್ತು 11 ನ್ನು ನಾವು ಓದಿ ಮುಂದುವರಿಯೋಣ

**2ಥೆಸ 2:10-11** - **"ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶದ ಮಾರ್ಗದಲ್ಲಿರುವವರಿಗೋಸ್ಕರವಾಗಿ ಬರುವನು. ಯಾಕೆಂದರೆ ಅವರು ಸತ್ಯವನ್ನು ಪ್ರೀತಿಸದೆ ನಿರಾಕರಿಸಿದ್ದರಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಇದೇ ಕಾರಣದಿಂದ ದೇವರು ಗಾಢಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಅವರು ಆ ಸುಳ್ಳನ್ನು ನಂಬುವಂತೆ ಒಳಪಡಿಸುತ್ತಾನೆ."**

ಹೌದು ! **ಸ್ವತ: ದೇವರೇ** ಈ ದೊಡ್ಡ ವಂಚನೆಗಳಾದ "ಸುಳ್ಳು ಅದ್ಭುತಗಳನ್ನು **"ಅನುಮತಿಸುತ್ತಾನೆಂದು** ನಾವು ಸ್ಪಷ್ಟವಾಗಿ ನೋಡುತ್ತೇವೆ !!

ಆದ್ದರಿಂದ ನಾವು ನೋಡುವುದೇನೆಂದರೆ, ಆದಿಸಭೆಯಲ್ಲಿ ಅನೇಕ ಅದ್ಭುತಗಳು ನಡೆದಿದ್ದರೂ, ಸಭೆಯ ವಿಶ್ವಾಸವು ಸ್ಥಾಪನೆಯಾಗುವುದಕ್ಕೆ ಸಹಾಯವಾಗಲಿಕ್ಕೆ ಸ್ವಲ್ಪ ಕಾಲ ಮಾತ್ರ ಇತ್ತು

.... ಹೊಸ ಒಡಂಬಡಿಕೆಯ ಸಾಕ್ಷಿಯನ್ನು ಬರೆದು ಮುಗಿಸುವ ತನಕ ಇತ್ತು

**ನಂತರ ಈ ಅದ್ಭುತ ಕಾರ್ಯಗಳು ಮತ್ತು ಗುಣ ಹೊಂದುವಿಕೆಯ "ಸಂಕೇತಗಳು" ಮರೆಯಾದವು !!**

ಈಗ ನಾವು ಇನ್ನೊಂದು ಪವಿತ್ರಾತ್ಮನ "ವರ" ವನ್ನು ಕುರಿತು ನೋಡೋಣ..

## ಪ್ರವಾದನೆಗಳು

ಹೌದು! ಈ ದಿನಗಳಲ್ಲಿ ಅನೇಕ ಸಭೆಗಳು ಕಾಲ ಕಾಲಕ್ಕೆ

"**ಪ್ರವಾದನೆಯ ಭಾನುವಾರ**" ವನ್ನು ಏರ್ಪಡಿಸುತ್ತಾರೆ.

ಆ ದಿನದಲ್ಲಿ ಒಬ್ಬ "**ಪ್ರವಾದಿ**"ಯು ಆರಾಧನೆ ಮತ್ತು ಪ್ರಾರ್ಥನೆಯ ನಂತರ

ಅಥವಾ ಪ್ರಾರ್ಥನೆಯ ಮಧ್ಯದಲ್ಲಿ ಬಂದು ಆತನ ಕಣ್ಣುಗಳನ್ನು ಮುಚ್ಚಿ – "**ಪ್ರವಾದನೆ**" ಎಂದು ಕರೆಯಲ್ಪಡುವುದನ್ನು ಮಾತನಾಡಲು ಆರಂಭಿಸುತ್ತಾನೆ.

ಆತನು ಭವಿಷ್ಯದಲ್ಲಿ ನಡೆಯುವ ಸಂಭವಗಳನ್ನು ಮುಂತಿಳಿಸಲು ಆರಂಭಿಸುತ್ತಾನೆ.

ಅವು ಯಾವುವೆಂದರೆ ಮದುವೆ



...ಮಕ್ಕಳು ಹುಟ್ಟುವದು

...ಮರಣವನ್ನು ಕುರಿತು ಸಹ

...ಮತ್ತು ಸುವಾರ್ತೆಯ ಸೇವೆಯಲ್ಲಿ ಸೇರ್ಪಡೆಯಾಗುವುದನ್ನು ಸಹ ಮುಂತಿಳಿಸುತ್ತಾನೆ.

ಆತನು ಯಾರ್ಯಾರಿಗೆ ರೋಗವಿದೆಯೋ ಅದನ್ನು ಕಂಡು ಹಿಡಿಯುತ್ತಾನೆ ಮತ್ತು ಅದರ ಗುಣವಾಗುವಿಕೆಯ ಕುರಿತು ಸಹ ಮಾತನಾಡುತ್ತಾನೆ.

**ಇವೆಲ್ಲಾ ಮಾಹಿತಿ ಮತ್ತು ಜ್ಞಾನವು - ಕರ್ತನಿಂದ ಹೊಂದಿದನೆಂದು ಹೇಳಿಕೊಳ್ಳುತ್ತಾನೆ.**

**ಸತ್ಯವೇದದಲ್ಲಿನ ಪ್ರವಾದನೆಯ ಅರ್ಥವು ಇದೇನಾ?**

ಈ ಪ್ರಶ್ನೆಗೆ ಉತ್ತರ ಕಂಡು ಹಿಡಿಯಲು ಕೆಳಗಿನ ವಾಕ್ಯವನ್ನು ಓದೋಣ

**ಪ್ರಕಟಣೆ 19:10**

**"ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಆತ್ಮವೇ"**

ಈ ವಾಕ್ಯವು ಪ್ರವಾದನೆಯ ಅರ್ಥವನ್ನು ಕುರಿತು ಹೇಳುತ್ತದೆ.

ಈ ವಾಕ್ಯವು ಹೇಳುವುದೇನೆಂದರೆ:

**"...ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಆತ್ಮವೇ..."**

ಈಗ, **"ಯೇಸುವಿನ ವಿಷಯವಾದ ಸಾಕ್ಷಿಯು"** ಎಂದರೇನು ?

**ಇದು ನಾಲ್ಕು ಸುವಾರ್ತಾ ಪುಸ್ತಕದಲ್ಲಿರುವ ಯೇಸುವಿನ ಸಾಕ್ಷಿಯನ್ನು ಕುರಿತು ಸೂಚಿಸುತ್ತದೆಯೇ ??**

ಇದಕ್ಕೆ ಉತ್ತರವನ್ನು ನಾವು ಸ್ವತ: ಯೇಸುವಿನಿಂದ ಕೇಳೋಣ.

**ಲೂಕ 24:27**

**"ಮೋಶೆಯ ಮತ್ತು ಎಲ್ಲಾ ಪ್ರವಾದಿಗಳಿಂದ ಆರಂಭಿಸಿ ಸಮಸ್ತ ಬರಹಗಳಲ್ಲಿ ತನ್ನ ವಿಷಯವಾದವುಗಳನ್ನು ಅವರಿಗೆ ವಿವರಿಸಿದನು"**

ಹೌದು! ಯೇಸು ನಮಗೆ ಹೇಳುವುದೇನೆಂದರೆ, ಆತನು ಅಂದು ಎಮ್ಮಾಹು ಎಂಬ ಹಳ್ಳಿಗೆ ಹೋಗುತ್ತಾ ಯೇಸುವಿನ ಸಾಕ್ಷಿ ಅಥವಾ **"ತನ್ನ ವಿಷಯುವಾದವುಗಳನ್ನು"** – "**ಮೋಶೆ**"ಯಿಂದ ಆರಂಭಿಸಿ "**ಎಲ್ಲಾ ಪ್ರವಾದಿಗಳವರೆಗೆ**" ಹೇಳಿರುವುದನ್ನು ತಿಳಿಸುತ್ತಿದ್ದಾನೆ.




ಹೌದು ! ಇಲ್ಲಿ **"ಮೋಶೆ"** ಎಂದರೆ ಐದು ಪುಸ್ತಕಗಳಾದ **ಆದಿಕಾಂಡ/ವಿಮೋಚನಕಾಂಡ/ಯಾಜಕಕಾಂಡ / ಅರಣ್ಯಕಾಂಡ/ ಧರ್ಮೋಪದೇಶಕಾಂಡ ಪುಸ್ತಕಗಳನ್ನು ಸೂಚಿಸುತ್ತದೆ.**

ಇದನ್ನು ಮೋಶೆ ಬರೆದನು ಮತ್ತು ಇದನ್ನು ಪೆಂಟಟೂಕ್ (**PENTATEUCH**) ಅಥವಾ ಥೋರ (**TORAH**) ಎಂದು ಯೆಹೂದ್ಯರು ಕರೆಯುತ್ತಾರೆ.

**ದಯುವಿಟ್ಟು ಗಮನಿಸಿ. ಇಲ್ಲಿ ಯೇಸು ನಮಗೆ ಖಚಿತಪಡಿಸುತ್ತಿರುವುದು ಏನೆಂದರೆ ಸತ್ಯವೇದವು ನಿಜವಾಗಿಯೂ ಮೋಶೆಯ ಇದು ಪುಸ್ತಕಗಳಿಂದ ಆರಂಭವಾಗುತ್ತದೆ.**

ಈಗ ಈ **"ಯೇಸುವಿನ ಸಾಕ್ಷಿಯು"** – ದೇವರು ಹೇಳಿದ

**"ಮನುಷ್ಯರನ್ನು ಉಂಟು ಮಾಡೋಣ"** ಎಂಬ ಮಾತಿನಿಂದ ಆರಂಭಗೊಂಡು (ಆದಿಕಾಂಡ 1: 26) ಇಲ್ಲಿ ದೇವರು ಯೇಸುವಿನೊಂದಿಗೆ ಮಾತನಾಡುತ್ತಾ, ಯೇಸು ಸಹ ಸೃಷ್ಟಿಕನಾಗಿದ್ದಾನೆಂದು ಸೂಚಿಸುತ್ತದೆ. (ಜಕ್ಷ್ಞಾನೋಕ್ತಿಗಳು 8: 30)

ನಂತರ ...

.....ಆದಿಕಾಂಡ 2: 17 ರಲ್ಲಿ ಕರ್ತನಾದ ದೇವರು ಆದಾಮನೊಂದಿಗೆ ಮಾತನಾಡುತ್ತಿರುವುದು ಬೇರೆ ಯಾರು ಅಲ್ಲ – ಅದು ಯೇಸು

"ದೇವರ ವಾಕ್ಯ" (ಯೋಹಾನ 1:1) ಅಥವಾ ಆತನ ವಕ್ತಾರ (ದೇವರ ಪರವಾಗಿ ಮಾತನಾಡುವ ವ್ಯಕ್ತಿ)

ಇನ್ನೂ ನಾವು ಹೀಗೆ ಓದುತ್ತೇವೆ....

ವಿಮೋಚನಕಾಂಡ 23 : 20, 21 ರಲ್ಲಿ ದೇವರು **"ಒಬ್ಬ ದೂತ"** ನನ್ನು ಕುರಿತು ಮಾತನಾಡುತ್ತಾನೆ. ಆ ದೂತನು ಇಸ್ರಾಯೇಲ್ಯರನ್ನು ಅರಣ್ಯ ಪಯಣದಲ್ಲಿ ದಾರಿತೋರಿಸಿ ಮಾರ್ಗದರ್ಶನ ನೀಡುವನು ಇದರಿಂದ ನಮಗೆ.

ಮನವರಿಕೆಯಾಗುವುದೇನೆಂದರೆ, 1 ಕೊರಿಂಥದವರಿಗೆ 10:4 ರಲ್ಲಿ, ಆ **"ದೂತನು"** ಬೇರೆ ಯಾರು ಅಲ್ಲ, ನಮ್ಮ ಕರ್ತನಾದ ಯೇಸು ಕ್ರಿಸ್ತನು

ನಂತರ ಮತ್ತೆ ನಾವು ಹೀಗೆ ಓದುತ್ತೇವೆ...

... ನ್ಯಾಯ ಸ್ಥಾಪಕರು 13ನೇ ಅಧ್ಯಾಯು ವಾಕ್ಯ 18 ರಲ್ಲಿ (ಆರ್.ಎಸ್.ವಿ ಸತ್ಯವೇದದಲ್ಲಿ ಸಂಸೋನನ ತಂದೆ ತಾಯಿಗೆ ಕಾಣಿಸಿಕೊಂಡ ಆ ದೂತನು ತನ್ನ ಹೆಸರನ್ನು "ಆಶ್ಚರ್ಯ"ವಾದದ್ದು ಎಂದು ಹೇಳಿದನು.

ಮತ್ತೆ ಈ ದೂತನ ಬೇರೆ ಯಾರು ಅಲ್ಲ, ಅದು ಯೇಸು (ಯೆಶಾಯ 9:6) ನಂತರ ಮತ್ತೆ ನಾವು ಹೀಗೆ ಓದುತ್ತೇವೆ.

...ಮಲಾಕಿಯ 3: 1 ರಲ್ಲಿ **"ನೀವು ಸಂತೋಷಪಡುವ ಒಡಂಬಡಿಕೆಯ ದೂತನೇ"** ಎಂದು ಸೂಚಿಸಲಾಗಿದೆ. ಇದು ಇಸ್ರಾಯೇಲ್ಯರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವ (ಸ್ಥಾಪಿಸಿಕೊಳ್ಳುವ) ಮೆಸ್ಸೀಯನಿಗೆ ಸೂಚಿತವಾಗಿದೆ.

ಮತ್ತೆ ಈ **"ದೂತನು"** ಮತ್ಯಾರು ಅಲ್ಲ ಅದು ಯೇಸುವೆ !!

ನಾವು ಹೀಗೆ ನೋಡುತ್ತಾ ಮುಂದುವರಿಯುತ್ತೇವೆ.... ಕೊನೆಯದಾಗಿ, ಸತ್ಯವೇದದ ಅಂತಿಮ ಅಧ್ಯಯದಲ್ಲಿ, ಹೀಗೆ ಓದುತ್ತೇವೆ.

...ಪ್ರಕಟಣೆ 22 : 17, ಅದೇನೆಂದರೆ

**"...ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ"**

ಇದು ಮಹಿಮೆಯೊಂದಿಗೆ ಇರುವ ಸಭೆಯ ಜೊತೆ ತನ್ನ ತಲೆಯೂ ಮತ್ತು ರಾಜನೂ ಮತ್ತು ಕರ್ತನೂ ಆದ ಯೇಸು ಕ್ರಿಸ್ತನನ್ನು ಸೂಚಿಸುತ್ತದೆ.

ಹೌದು ! ಇಡೀ ಸತ್ಯವೇದವು ಉನ್ನತ **"ದೇವರ ಸೇವಕ"** (ಯೆಶಾಯ 52:13)

ಮತ್ತು ದೇವರ ದೈವೀಕ ಯೋಜನೆಯನ್ನು ಕಾರ್ಯಗತಗೊಳಿಸುವ **“ಯೇಸುವಿನ ಸಾಕ್ಷಿ”**ಯಾಗಿದೆ.



**ಆದ್ದರಿಂದ ನಿಜವಾದ ಪ್ರವಾದನೆ ಎಂದರೆ ಸತ್ಯವೇದದ ಬೋಧನೆ ಮತ್ತು ಅದರಲ್ಲಿನ ಸತ್ಯವನ್ನು ತೆರೆದಿಡುವುದು**

**“ಇಲ್ಲಿ ಸ್ವಲ್ಪವೂ... ಮತ್ತು ಅಲ್ಲಿ ಸ್ವಲ್ಪವೂ”**

ಆದ್ದರಿಂದ ನಾವು ಹೀಗೆ ಓದುತ್ತೇವೆ

**ಅಪೋಸ್ತಲರ ಕೃತ್ಯಗಳು 2:18**

"ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು, ಅವರೂ ಪ್ರವಾದಿಸುವರು."

ಹೌದು ! ಪವಿತ್ರಾತ್ಮನ ಮೂಲಕವಾಗಿ ಮಾತ್ರವೇ ಸತ್ಯವೇದದಲ್ಲಿರುವ ದೇವರ ದೈವೀಕ ಯೋಜನೆಯ ಸತ್ಯವನ್ನು **ಗ್ರಹಿಸಲು** ಸಾಧ್ಯ ಮತ್ತು ವಿವರಿಸಲು ಸಾಧ್ಯ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**1 ಕೊರಿಂಥದವರಿಗೆ 2:14**

"ಪ್ರಾಪಂಚಿಕನಾದವನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತನಾಗಿ ತೋರುತ್ತವೆ; ಅವು ಆತ್ಮದ ಮೂಲಕ ತಿಳಿದುಕೊಳ್ಳ ಬೇಕಾಗಿರುವುದರಿಂದ ಅವನು ಅವುಗಳನ್ನು ಗ್ರಹಿಸಲಾರನು."

## ಇದು ಸ್ಪಷ್ಟವಾಗಿದೆಯಲ್ಲವೇ ? !

ಈಗ ನಾವು ಸತ್ಯವೇದದಲ್ಲಿ **ಸುಳ್ಳು** ಪ್ರವಾದಿಗಳು ಮತ್ತು **ಸುಳ್ಳು** ಬೋಧಕರನ್ನು ಕುರಿತು ಸಹ ಓದುತ್ತೇವೆ.

### 2 ಪೇತ್ರನು 2:1-3

"ಆದರೆ ಜನರಲ್ಲಿ ಸುಳ್ಳು ಪ್ರವಾದಿಗಳು ಸಹ ಇದ್ದರು; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು ಪಾಷಾಂಡ ಬೋಧನೆಗಳನ್ನು ರಹಸ್ಯವಾಗಿ ಒಳತರುವವರೂ ತಮ್ಮನ್ನು ಕೊಂಡುಕೊಂಡ ಕರ್ತನನ್ನು ಕೂಡ ತಾವು ಅಲ್ಲಗಳೆಯುವವರೂ ಆಗಿದ್ದು ಫಕ್ಕನೆ ತಮ್ಮ ಅವರ ಕೆಡುಕಿನ ಮಾರ್ಗಗಳನ್ನು ಅನೇಕರು ಅನುಸರಿಸುವರು; ಅವರ ನಿಮಿತ್ತ ಸತ್ಯ ಮಾರ್ಗಕ್ಕೆ ದೂಷಣೆ ಉಂಟಾಗುವದು. ಅವರು ದ್ರವ್ಯಾಶೆಯುಳ್ಳವರಾಗಿ ಕಲ್ಪನೆಯ ಮಾತು ಗಳನ್ನು ಹೇಳುತ್ತಾ ನಿಮ್ಮಿಂದ ಲಾಭವನ್ನು ಸಂಪಾದಿಸ ಬೇಕೆಂದಿರುವರು. ಅಂಥವರಿಗೆ ಬಹಳ ಕಾಲದಿಂದಿದ್ದ ತೀರ್ಪು ತಡವಾಗುವದಿಲ್ಲ. ಅವರಿಗಾಗುವ ನಾಶನವು ತೂಕಡಿಸುವದಿಲ್ಲ."

ಹೌದು ! ನಾವು **ಸ್ಪಷ್ಟವಾಗಿ** ಓದುವುದೇನೆಂದರೆ, ಸಭೆಯೊಳಗೆ ಮತ್ತು ಸಭೆಗಳ ಮಧ್ಯದಲ್ಲಿ ಅನೇಕ ಸುಳ್ಳು ಪ್ರವಾದಿಗಳು ಅಥವಾ ಸುಳ್ಳು ಬೋಧಕರು ಹುಟ್ಟಿಕೊಳ್ಳುತ್ತಾರೆ !!!



**ಈಗ ನಮಗೆ ತೋರುವ ಪ್ರಶ್ನೆ ಏನೆಂದರೆ -**
**"ಒಬ್ಬ ವ್ಯಕ್ತಿ ಸುಳ್ಳು ಪ್ರವಾದಿ ಅಥವಾ ಸುಳ್ಳು ಬೋಧಕನನ್ನು ಹೇಗೆ ಗುರುತಿಸುವುದು?"**

ಅದಕ್ಕೆ ಉತ್ತರವನ್ನು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಯೋಹಾನ 4:1**

**"ಪ್ರಿಯರೇ, ಅನೇಕ ಸುಳ್ಳುಪ್ರವಾದಿಗಳು ಲೋಕದೊಳಗೆ ಬಂದಿರುವುದರಿಂದ ನೀವು ಎಲ್ಲಾ ಆತ್ಮಗಳ ನುಡಿಗಳನ್ನು ನಂಬದೆ ಆಯಾ ಆತ್ಮಗಳ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು."**

ಹೌದು ! ಅಪೋಸ್ತಲನಾದ ಯೋಹಾನನು ಸುಳ್ಳು ಪ್ರವಾದಿಗಳನ್ನು ಕುರಿತು ಎಚ್ಚರಿಸುತ್ತಾನೆ ಮತ್ತು ಇನ್ನೂ ಬುದ್ಧಿ ಹೇಳುವುದೇನೆಂದರೆ,

**"ಆತ್ಮದ ನುಡಿಗಳು ದೇವರಿಂದ ಪ್ರೇರಿತವಾದುವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು"**

**ಇದರ ಅರ್ಥವೇನು ?**

**ಇಲ್ಲಿ ಕೊಟ್ಟಿರುವ "ಆತ್ಮ" ಎಂದರೇನು ಅರ್ಥ ?**

ನಿಮಗೆ ನೆನಪಿದ್ದರೆ, ಹಿಂದಿನ ಅಧ್ಯಯನದಲ್ಲಿ (ಅಭ್ಯಾಸ ನಂ. 7 ನಮ್ಮ ಅತಿ ಪರಿಶುದ್ಧವಾದ ನಂಬಿಕೆ)

ನಾವು ಅಧ್ಯಯನ ಮಾಡಿದಂತೆ ಸತ್ಯವೇದದಲ್ಲಿ "**ಅತ್ಮ**"ವು

... ಕಣ್ಣಿಗೆ ಕಾಣದೆಯೂ ಮತ್ತು ಬಲವುಳ್ಳದಾಗಿದೆ ಎಂದು ಸೂಚಿಸುತ್ತದೆ.

ಮುಂದೆ, "**ಆತ್ಮ**" ಎಂಬ ಪದಕ್ಕೆ ಮೂರು ಅರ್ಥಗಳಿವೆ.

1. **"ಜೀವ ಶ್ವಾಸ"** – **ಪ್ರಸಂಗಿ** 12:7
2. **"ಮನಸ್ಸು"** – **ದಾನಿಯೇಲನು** 2:1
3. **ಮತ್ತು ..."ವಾಕ್ಯಗಳು" ಅಥವಾ "ಬೋಧನೆಗಳು ಎಂದು ಕೆಳಗಿನ ವಾಕ್ಯದಿಂದ ಕಲಿತುಕೊಳ್ಳುತ್ತೇವೆ –**

**ಯೋಹಾನ 6:63**

**"ನಾನು ನಿಮಗೆ ಹೇಳುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಇವೆ"**

ಆದ್ದರಿಂದ ಇಲ್ಲಿ "**ಆತ್ಮ**" ಎಂದರೆ "**ವಾಕ್ಯ**"ಗಳು ಅಥವಾ "ಬೋಧನೆಗಳು"

**ಆದ್ದರಿಂದ ಅಪೋಸ್ತಲನಾದ ಯೋಹಾನನು ಸಭೆಗೆ ಎಚ್ಚರಿಸುತ್ತಾ "ಆತ್ಮಗಳನ್ನು ಪರೀಕ್ಷಿಸಬೇಕು" ಎಂದರೆ -**

**. . . .ನಾವು ಎಲ್ಲಾ ಬೋಧನೆಗಳನ್ನು ಕೇಳುವಾಗ ಅವು ದೇವರದೋ ಮತ್ತು ಆತನ ವಾಕ್ಯದಲ್ಲಿದೆಯೋ ಎಂದು ಪರೀಕ್ಷಿಸಬೇಕು"**



ಅಪೋಸ್ತಲನಾದ ಪೌಲನು ಸಭೆಗೆ ಸ್ಪಷ್ಟವಾಗಿ ಎಚ್ಚರಿಸುವುದೇನೆಂದರೆ,

"....ಎಲ್ಲಾ ಆತ್ಮಗಳನ್ನು ನಂಬೇಡಿರಿ...."

ಹೌದು ! ಏಕೆಂದರೆ ಅನೇಕ ಸುಳ್ಳು ಬೋಧಕರು ಇರುವುದರಿಂದ ನಾವು ಕೇಳುವ ಪ್ರತಿಯೊಂದು ಬೋಧನೆಯನ್ನು ಪರೀಕ್ಷಿಸಬೇಕು ಮತ್ತು ಅದು ದೇವರಿಂದ ಮತ್ತು ಆತನ ವಾಕ್ಯದಿಂದ ಬಂದದ್ದೋ ಎಂದು ಪರೀಕ್ಷಿಸಬೇಕು !


ಆದ್ದರಿಂದ ನಾವು ಆದಿಸಭೆಯಲ್ಲಿ ಕ್ರೈಸ್ತರ ಉದಾಹರಣೆಯನ್ನು ಕುರಿತು ಹೀಗೆ ಓದುತ್ತೇವೆ

## ಅಪೋಸ್ತಲರ ಕೃತ್ಯಗಳು 17:11

"ಆ ಸಭೆಯವರು ದೇವರ ವಾಕ್ಯವನ್ನು ಸಿದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಅಲ್ಲವೋ ಎಂದು ಕಂಡುಕೊಳ್ಳಲು ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದದರಿಂದ ಅವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದರು."

ನೀವು ಮತ್ತು ನಾನು ಈ **ಬೆರೋಯದವರಂತೆ ಇದ್ದೇವಾ**?

ಹೌದು ! ನಾವು **ಹಾಗಿದ್ದರೆ,** ಈ ಸುಳ್ಳು ಪ್ರವಾದಿಗಳಿಂದ ಸುರಕ್ಷಿತವಾಗಿದ್ದೇವೆ.




ದೇವರ ವಾಕ್ಯದ ಮೂಲಕ ನಿಜವಾದ ದೇವರ ಪ್ರವಾದಿಗಳನ್ನು ಗುರುತಿಸುತ್ತೇವೆ !!

ಈಗ ನಾವು "**ಸುಳ್ಳು ಪ್ರವಾದಿಯನ್ನು**" ಕುರಿತು ಪ್ರಕಟಣೆ ಪುಸ್ತಕದಲ್ಲಿ ಹೀಗೆ ಓದುತ್ತೇವೆ.

## ಪ್ರಕಟಣೆ 16 : 13 / 19 : 20

"ಆಗ ಘಟಸರ್ಪದ ಬಾಯಿಂದ, ಮೃಗದ ಬಾಯಿಂದ ಮತ್ತು ಸುಳ್ಳುಪ್ರವಾದಿಯ ಬಾಯಿಂದ ಕಪ್ಪೆಗಳಂತಿದ್ದ ಮೂರು ಅಶುದ್ಧಾತ್ಮಗಳು ಬರುವುದನ್ನು ಕಂಡೆನು."

"ಆಗ ಆ ಮೃಗವನ್ನು ಸೆರೆಹಿಡಿಯಲಾಯಿತು. ಇದಲ್ಲದೆ ಮೃಗದ ಪರವಾಗಿ ಮಹತ್ಕಾರ್ಯಗಳನ್ನು ಮಾಡಿ, ಮೃಗದ ಗುರುತು ಹಾಕಿಸಿಕೊಂಡವರನ್ನೂ ಅದರ ವಿಗ್ರಹಕ್ಕೆ ಆರಾಧಿಸಿದವರನ್ನೂ ಮರುಳುಗೊಳಿಸಿದ ಆ ಸುಳ್ಳುಪ್ರವಾದಿಯೂ ಅದರೊಂದಿಗೆ ಸೆರೆಸಿಕ್ಕಿದನು. ಇವರಿಬ್ಬರನ್ನೂ ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಗೆ ಹಾಕಲಾಯಿತು."

## "ಈ ಸುಳ್ಳು ಪ್ರವಾದಿ" ಯಾರು ?

ಇದು ಸತ್ಯವೇದದ ಬೋಧನೆಗಳನ್ನು ಬೋಧಿಸುವುದಾಗಿ ಹೇಳಿಕೊಳ್ಳುವ ವ್ಯವಸ್ಥೆಯನ್ನು **ಸಾಂಕೇತಿಕವಾಗಿ** ಸೂಚಿಸಲಾಗಿದೆ ಆದರೆ **ನಿಜವಾಗಿಯೂ** ಸತ್ಯವೇದಲ್ಲಿ ಹೇಳಿರುವ ಸುಳ್ಳು ಬೋಧಕರಾಗಿದ್ದಾರೆ !!

**ಹೌದು ! ಇದು ಸಾಂಕೇತಿಕವಾಗಿದ್ದು,**

**..."ದಿ ಫೆಡರೇಷನ್ ಆಫ್ ಪ್ರಾಟೆಸ್ಟನ್ಟ್ ಚರ್ಚಸ್"**

**ಅನ್ನು ಸೂಚಿಸುತ್ತದೆ.**

ಈ ಸಭೆಗಳ "**ವ್ಯವಸ್ಥೆ**" ಮತ್ತು ಅದರ "**ಸುಳ್ಳು ಪ್ರವಾದನೆ**"ಗಳನ್ನು ಕುರಿತು ಸ್ವತ: ದೇವರೆ ಮಾತನಾಡಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಯೆರೆಮಿಯ 23:21

"ನಾನು ಪ್ರವಾದಿಗಳನ್ನು ಕಳುಹಿಸಲಿಲ್ಲ, ಅದಾಗ್ಯ ಅವರು ಓಡಿದರು, ನಾನು ಅವರ ಸಂಗಡ ಮಾತನಾಡಲಿಲ್ಲ ಅದಾಗ್ಯೂ ಪ್ರವಾದಿಸಿದರು"

ಹೌದು! ಇವರು ಕರ್ತನ ಅಥವಾ ಆತನ **ಸತ್ಯದ ಸೇವಕರಲ್ಲ**
ಆದರೂ ಅವರು

**...ಕೂಟಗಳಲ್ಲಿ(in meetings)** **...ಜನಸಮೂಹಗಳಲ್ಲಿ (Public places)**

**....ಆಕಾಶವಾಣಿಗಳಲ್ಲಿ (Radio )** **...ಮತ್ತು ದೂರದರ್ಶನಗಳಲ್ಲಿ (Television)**

ಸತ್ಯವೇದವನ್ನು ಕುರಿತು ಬೋಧಿಸುತ್ತಾರೆ.

ಆದರೆ ಸ್ವತ: ದೇವರು ಈ ಸುಳ್ಳು ಪ್ರವಾದಿಗಳು ಮತ್ತು ಸುಳ್ಳು ಬೋಧಕರನ್ನು ಕುರಿತು ಹೀಗೆ ವಿವರಿಸುತ್ತಾನೆ.

## ಯೆರೆಮಿಯ 23 : 16, 17 / 23 : 30-32

"ಸೇನಾಧೀಶ್ವರನಾದ ಯೆಹೋವನು, "ನಿಮಗೆ ಪ್ರವಾದಿಸುವ ಪ್ರವಾದಿಗಳ ಮಾತುಗಳನ್ನು ಕೇಳಬೇಡಿರಿ. ಅವರು ನಿಮ್ಮಲ್ಲಿ ವ್ಯರ್ಥ ನಿರೀಕ್ಷೆಯನ್ನು ಹುಟ್ಟಿಸುತ್ತಾರೆ; ಯೆಹೋವನ ಬಾಯಿಂದ ಹೊರಟದ್ದನ್ನು ನುಡಿಯದೆ ಸ್ವಂತ ಮನಸ್ಸಿಗೆ ಬಂದದ್ದನ್ನೇ ಹೇಳುತ್ತಾರೆ. ನನ್ನನ್ನು ಅಸಡ್ಡೆಮಾಡುವವರಿಗೆ, 'ನಿಮಗೆ ಶುಭವಾಗುವುದು ಎಂಬುದಾಗಿ ಯೆಹೋವನು ನುಡಿದಿದ್ದಾನೆ' ಎಂದು ಹೇಳುತ್ತಲೇ ಇದ್ದಾರೆ. ಸ್ವಂತ ಹೃದಯದ ಹಟದಂತೆ ನಡೆಯುವವರೆಲ್ಲರಿಗೂ, 'ನಿಮಗೆ ಯಾವ ಕೇಡೂ ಸಂಭವಿಸದು' ಎಂದು ನುಡಿಯುತ್ತಾರೆ."

"ಆಹಾ, ನನ್ನ ಮಾತುಗಳನ್ನು ತಮ್ಮ ತಮ್ಮ ನೆರೆಯವರಿಂದ ಕದ್ದುಕೊಳ್ಳುವ ಪ್ರವಾದಿಗಳಿಗೆ ನಾನು ವಿರುದ್ಧನಾಗಿದ್ದೇನೆ. ಇದು ಯೆಹೋವನ ನುಡಿ. ಆಹಾ, ತಮ್ಮ ನಾಲಿಗೆಗಳನ್ನು ಚಾಚಿ "ಯೆಹೋವನು ನುಡಿಯುತ್ತಾನೆ" ಎಂದು ಹೇಳುವ ಪ್ರವಾದಿಗಳಿಗೆ ನಾನು ಪ್ರತಿಭಟಿಸುವವನಾಗಿದ್ದೇನೆ. ಇದು ಯೆಹೋವನ ನುಡಿ. ಆಹಾ, ಸುಳ್ಳು ಕನಸುಗಳನ್ನು ಪ್ರಕಟಿಸಿ, ವಿವರಿಸಿ ತಮ್ಮ ಸುಳ್ಳು ಮಾತುಗಳಿಂದಲೂ, ನಿರ್ಲಕ್ಷದಿಂದಲೂ ನನ್ನ ಜನರಿಗೆ ದಾರಿತಪ್ಪಿಸುವ ಪ್ರವಾದಿಗಳನ್ನು ಎದುರಿಸುವವನಾಗಿದ್ದೇನೆ; ನಾನು ಅವರನ್ನು ಕಳುಹಿಸಲಿಲ್ಲ,


ಆಜ್ಞಾಪಿಸಲಿಲ್ಲ. ಅವರಿಂದ ಈ ಜನರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಇದು ಯೆಹೋವನ ನುಡಿ."

ಹೌದು! ಈ ಸುಳ್ಳು ಪ್ರವಾದಿಗಳು... "ಕರ್ತನ ಬಾಯಿಯ ಮೂಲಕ" ಮಾತನಾಡುತ್ತಾರೆ ಎಂದು ಹೇಳಿಕೊಳ್ಳುವುದನ್ನು ಕುರಿತು ಸ್ವತಃ ಕರ್ತನೇ ವಿವರಿಸುತ್ತಾನೆ.

ಆದರೆ ನಿಜವಾಗಿಯೂ ಅವರು...

"ತಮ್ಮ ಸ್ವಂತ ಮನಸ್ಸಿಗೆ ಬಂದಿದ್ದನ್ನೇ" ಹೇಳುತ್ತಾರೆ.

ಈ ದಿನಗಳಲ್ಲಿ ಇವೆಲ್ಲವು ನಮ್ಮ ಕಣ್ಣೆದುರೇ **ನೆರೆವೇರುವುದನ್ನು** ನೋಡುತ್ತೇವಲ್ಲವೆ.....ಅನೇಕ ಬೋಧಕರು ದೂರದರ್ಶನದಲ್ಲಿ, ರೇಡಿಯೋದಲ್ಲಿ, ಮುದ್ರಿತ ಪುಸ್ತಕಗಳಲ್ಲಿ ಮತ್ತು ಸಭೆ ಕೂಟಗಳಲ್ಲಿ ಹೀಗೆ ಹೇಳುತ್ತಾರೆ.



ಕರ್ತನು **ನನಗೆ** ಹೀಗೆ (ಇದನ್ನು) **ಹೇಳಿದನು...**

ಮತ್ತು ಕರ್ತನು **ನನಗೆ ಹಾಗೆ** (ಅದನ್ನು) **ಹೇಳಿದನು...**

ಇನ್ನೂ ಸುಳ್ಳು ಪ್ರವಾದಿಗಳು ತಮಗೆ "ಭಾರ"ವಿರುವುದನ್ನು ಕುರಿತು ಕರ್ತನು ಹೀಗೆ ಹೇಳುವುದನ್ನು ಓದುತ್ತೇವೆ.

**ಯೆರೆ 23:38 -** "ಒಂದು ವೇಳೆ ನೀವು 'ಯೆಹೋವನ ಹೊರೆ' ಎಂದು ಉಚ್ಚರಿಸಿದರೆ

ಯೆಹೋವನು ಇಂತೆನ್ನುತ್ತಾನೆ, 'ನಾನು ನಿಮಗೆ ಯೆಹೋವನ ಹೊರೆ ಎಂಬ ಮಾತನ್ನು ಎತ್ತಲೇ ಕೂಡದು ಎಂದು ಹೇಳಿಕಳುಹಿಸಿರುವಲ್ಲಿ ನೀವು ಯೆಹೋವನ ಹೊರೆ ಎಂದು ಹೇಳಿದ ಕಾರಣ ಇಗೋ,"

ಹೌದು ! ಈ "**ಭಾರಗಳನ್ನು**" ಹೇಳಿಕೊಳ್ಳುವ ಈ ಸುಳ್ಳು ಪ್ರವಾದಿಗಳ ಮಾತೆಲ್ಲವೂ ನಿಜವಲ್ಲ !

ಈಗ ನಾವು ಈ ಸುಳ್ಳು ಪ್ರವಾದಿಗಳ ಮೇಲೆ ಬರುವ ಅಂತಿಮ ನ್ಯಾಯತೀರ್ಪನ್ನು ಕುರಿತು ಓದೋಣ –

## ಯೆರೆಮಿಯ 23:40

"ಮತ್ತು ನಾನು ನಿತ್ಯನಿಂದೆಯನ್ನೂ ಎಂದಿಗೂ ಮರೆಯದ ಶಾಶ್ವತ ಅವಮಾನವನ್ನು ನಿಮಗೆ ಬರಮಾಡುವೆನು."

ಹೌದು ! ಇದು ಹೇಗೆ ನೆರವೇರುತ್ತದೆ ಎಂಬ ವಿವರಗಳನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಜೆಕರ್ಯ 13:4-6

"ಆ ದಿನದಲ್ಲಿ ಯಾವ ಪ್ರವಾದಿಯೇ ಆಗಲಿ ಪ್ರವಾದನೆ ಮಾಡಬೇಕೆಂದಿರುವಾಗ ತನಗಾದ ದರ್ಶನವನ್ನು ಪ್ರಕಟಿಸಲು ನಾಚಿಕೆಪಡುವನು; ಯಾವನೂ ಮೋಸಕ್ಕಾಗಿ ಕಂಬಳಿಯನ್ನು ಹೊದ್ದುಕೊಳ್ಳನು; ಒಬ್ಬನು, 'ನಾನು ಪ್ರವಾದಿಯಲ್ಲ, ಹೊಲದ ಕೆಲಸದವನು; ಚಿಕ್ಕ ವಯಸ್ಸಿನಿಂದಲೂ ರೈತನಾಗಿದ್ದೇನೆ. ' ಎಂದು ಹೇಳಲು, ಮತ್ತೊಬ್ಬನು ಅವನನ್ನು, 'ನಿನ್ನ ಎದೆಯ ಮೇಲಿರುವ ಈ ಗಾಯಗಳು ಏನು?' ಎಂದು ಕೇಳಿದರೆ ಅವನು, 'ಮಿತ್ರರ ಮನೆಯಲ್ಲಿ ನನಗಾದ ಗಾಯಗಳು" ಎಂದು ಉತ್ತರ ಕೊಡುವನು."

**ಎಂತಹ ವಿಶಿಷ್ಟವಾದ ಪ್ರವಾದನೆ !!!**


**ಇದರ ಅರ್ಥವೇನು ?**

ಇದು ಆ "ದಿನ"ದಲ್ಲಿ ಈ ಸುಳ್ಳು ಪ್ರವಾದಿಗಳ ಬಣ್ಣ ಬಯಲಾಗುವುದನ್ನು ಕುರಿತು ಹೇಳುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

**ಜ್ಞಾನೋ 30:6** - "ಆತನ ಮಾತುಗಳಿಗೆ ಯಾವುದನ್ನೂ ಸೇರಿಸಬೇಡ, ಆತನು ನಿನ್ನನ್ನು ಖಂಡಿಸುವಾಗ ನೀನು ಸುಳ್ಳುಗಾರನೆಂದು ತೋರಿಬಂದೀಯೆ."

ಹೌದು ! ಈ ಪ್ರವಾದನೆಯು ಈ ಸುಳ್ಳು ಪ್ರವಾದಿಗಳು ಮತ್ತು ಸುಳ್ಳು ಬೋಧಕರ ಮೇಲೆ ಬರಲಿರುವ ನ್ಯಾಯತೀರ್ಪಿನ ವಿವರಗಳನ್ನು ಕುರಿತು ಮಾತನಾಡುತ್ತದೆ. ಈಗ ನಾವು ಇಲ್ಲಿ ಉಪಯೋಗಿಸಿರುವ  ಸಂಕೇತಗಳು ಮತ್ತು ಅದರ

ಅರ್ಥವನ್ನು ಕುರಿತು ನೋಡೋಣ –

 "ನಾನು ಪ್ರವಾದಿಯಲ್ಲ, ನಾನು ಭೂಮಿಯಲ್ಲಿ ವ್ಯವಸಾಯ ಮಾಡುವವನು"

ಇದು ದೇವರ ವಾಕ್ಯದ ಬೋಧಕರು ಮತ್ತು ಪ್ರತಿವಾದಿಗಳಿಗೆ ಆಗ ಮನವರಿಕೆಯಾಗುವುದನ್ನು ಸೂಚಿಸುತ್ತದೆ.

ಅವರಿಗೆ ತಾವು ಭೂಮಿಗೆ ಮತ್ತು ಮಾಂಸಕ್ಕೆ (ಶರೀರಕ್ಕೆ) ಸಂಬಂಧಪಟ್ಟವರೆಂದು ಮನವರಿಕೆಯಾಗುತ್ತದೆ.

 ......ಮತ್ತು ಆತ್ಮೀಕಕ್ಕೆ ಸಂಬಂಧಪಟ್ಟವರಲ್ಲ !

ಹೇಗೆ ವ್ಯವಸಾಯಿ ಬೀಜಗಳನ್ನು ಬಿತ್ತಿ ಭೂಮಿಯೊಳಗಿಂದ ಫಲಗಳನ್ನು ಎದುರು ನೋಡುತ್ತಾನೋ, ಹಾಗೆಯೇ ಈ ಪ್ರವಾದಿಗಳು ಮತ್ತು ವ್ಯವಸ್ಥಿತ "ಸೇವಕರು" ಲೌಕಿಕ ಲಾಭಕ್ಕಾಗಿ ಮತ್ತು ಐಶ್ವರ್ಯಗಳಾದ ಭೂಮಿ, ಕಟ್ಟಡಗಳು, ಹಣ, ಗಾಡಿಗಳು, ಹೆಸರಿಗಾಗಿ, ಪ್ರತಿಷ್ಠೆಗಾಗಿ ಓಡುವರು,



– ಇವೆಲ್ಲವೂ “**ಕರ್ತನ ಸೇವೆಯು**” ಹೆಸರಿನಲ್ಲಿ ನಡೆಯುತ್ತದೆ.

ಹೌದು! ಅವರು “**ನಾನು ಪ್ರವಾದಿ**” ಅಲ್ಲ ಎಂದು ಒಪ್ಪಿಕೊಳ್ಳುತ್ತಾರೆ.

**“ಒಬ್ಬನು ನನ್ನನ್ನು ಚಿಕ್ಕತನದಿಂದ ದನಗಳನ್ನು ಕಾಯುವುದಕ್ಕೆ ಕಲಿಸಿದನು”**

ಇದು ಅವರು “**ಮನುಷ್ಯನು**” ಉಂಟು ಮಾಡಿದ ಕ್ರಿಸ್ತ ವಿರೋಧಿ ಸಭೆಯ ವ್ಯವಸ್ಥೆಗಳಲ್ಲಿ ತರಬೇತಿ ಹೊಂದಿರುವುದನ್ನು ಒಪ್ಪಿಕೊಳ್ಳುವುದನ್ನು ಸೂಚಿಸುತ್ತದೆ ಮತ್ತು ಸತ್ಯವೇದ ಕಾಲೇಜ್‌ಗಳಲ್ಲಿ ಹೇಗೆ

ಸೇವೆಗಳು ಮತ್ತು ಸಭೆಗಳನ್ನು ನಡೆಸಲು ಒತ್ತು ಕೊಡಬೇಕೆಂದು ಹೇಳಿಕೊಡುತ್ತದೆ ಮತ್ತು ನಿರ್ವಹಣೆ ಮತ್ತು ಹಣಕಾಸಿನ ವಿಷಯಗಳಲ್ಲಿ ತರಬೇತಿ




ನೀಡುತ್ತದೆ ಆದರೆ ದೇವರ ವಾಕ್ಯದಲ್ಲಿರುವ ಆತ್ಮೀಕ ಸತ್ಯಗಳಲ್ಲಿ ತರಬೇತಿ ನೀಡುವುದಿಲ್ಲ.

ಹೌದು ! ಅವರು ಆತ್ಮೀಕರಾಗಿ ಎಂದಿಗೂ **ಇದ್ದಿಲ್ಲ** ಎಂದು ಒಪ್ಪಿಕೊಳ್ಳುತ್ತಾರೆ !

**“ನನ್ನ ಸ್ನೇಹಿತರ ಮನೆಯಲ್ಲಿ ನನಗುಂಟಾದ ಗಾಯಗಳೇ ಅನ್ನುವನು”**

ಹೌದು! ಇದು ಈ “**ಪ್ರವಾದಿಗಳು**” ಮತ್ತು “**ಬೋಧಕರಿಗೆ**” ತಮ್ಮ “**ಸ್ನೇಹಿತ**”ರಿಂದಲೇ ಬರುವ ಕಠಿಣವಾದ ನ್ಯಾಯತೀರ್ಪುಗಳನ್ನು ಸೂಚಿಸುತ್ತದೆ.

ಅವರನ್ನು ಬೆಂಬಲಿಸಿ, ಗೌರವಿಸಿದ ಅದೇ ಜನರಿಂದ ನ್ಯಾಯತೀರ್ಪು ಉಂಟಾಗುತ್ತದೆ!!

**ಹೌದು ! ಇದೊಂದು ಭಯಂಕರವಾದ ಅಂತ್ಯವಾಗಿ ಈ ಸುಳ್ಳು ವ್ಯವಸ್ಥೆಗಳು ಮತ್ತು ಸುಳ್ಳು ಪ್ರವಾದಿಗಳಿಗೆ ಉಂಟಾಗುತ್ತದೆ.**

ಈಗ ನಾವು ಈ ದಿನದ ಅಧ್ಯಯನದಲ್ಲಿ, ಪವಿತ್ರಾತ್ಮನ ಕೊನೆಯ **"ವರ"** ವನ್ನು ಕುರಿತು ನೋಡೋಣ

# ದರ್ಶನಗಳು

ಈಗ **"ದರ್ಶನಗಳು"** ಎಂದರೆ ದೇವರು ಕೆಲವು ಆತ್ಮೀಕ ವಿಷಯಗಳನ್ನು ತಿಳಿಸುವುದಕ್ಕಾಗಿ ಉಪಯೋಗಿಸುವ ದೃಶ್ಯ ಚಿತ್ರಗಳಾಗಿವೆ (**VISUAL IMAGES**) ಅವು ಯಾವುದೆಂದರೆ –

- **ಯೇಸು ರೂಪಾಂತರಗೊಂಡದ್ದು (ಮತ್ತಾಯ 17 : 1 – 9)**
- **ಮತ್ತು ... ಪೇತ್ರನ ದರ್ಶನವನ್ನು ಕುರಿತು ಹೀಗೆ ಓದುತ್ತೇವೆ. ಅಪೋಸ್ತಲರ ಕೃತ್ಯಗಳು**

10:11-17 - "ಅವನು ಧ್ಯಾನಪರವಶನಾಗಿ ಆಕಾಶವು ತೆರೆದಿರುವುದನ್ನೂ, ನಾಲ್ಕು ಮೂಲೆಗಳನ್ನು ಕಟ್ಟಿದ್ದ ದೊಡ್ಡ ಜೋಳಿಗೆಯಂತಿರುವ ಒಂದು ವಸ್ತುವು ಭೂಮಿಯ ಮೇಲೆ ಇಳಿಯುವುದನ್ನೂ ಕಂಡನು. ಅದರೊಳಗೆ ಸಕಲ ವಿಧವಾದ ಪಶುಗಳೂ, ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳೂ ಇದ್ದವು.



**ಆಣ; "ಪೇತ್ರನೇ, ಎದ್ದು, ಕೊಯ್ದು ತಿನ್ನು" ಎಂದು ಅವನಿಗೆ ಒಂದು ವಾಣಿ ಕೇಳಿಸಿತು. ಅದಕ್ಕೆ ಪೇತ್ರನು; "ಬೇಡವೇ ಬೇಡ ಕರ್ತನೇ, ನಾನು ಎಂದೂ ಹೊಲೆ ಪದಾರ್ಥವನ್ನಾಗಲಿ, ಅಶುದ್ಧವಾದವುಗಳನ್ನಾಗಲಿ ತಿಂದವನಲ್ಲ" ಅಂದನು. ಅದಕ್ಕೆ; "ದೇವರು ಶುದ್ಧಮಾಡಿದ್ದನ್ನು ನೀನು ಹೊಲೆ ಎನ್ನಬಾರದೆಂದು" ಪುನಃ ಎರಡನೆಯ ಸಾರಿ ಅವನಿಗೆ ವಾಣಿ ಕೇಳಿಸಿತು. ಹೀಗೆ ಮೂರು ಸಾರಿ ಆಯಿತು. ಆದ ಮೇಲೆ ಆ ವಸ್ತುವು ಆಕಾಶದೊಳಗೆ ಸೇರಿಕೊಂಡಿತು. ಪೇತ್ರನು ತನಗಾದ ದರ್ಶನವು ಏನಾಗಿರಬಹುದೆಂದು ತನ್ನಲ್ಲಿ ಕಳವಳ ಪಡುತ್ತಿರುವಾಗಲೇ, ಆಗೋ, ಕೊರ್ನೇಲ್ಯನು ಕಳುಹಿಸಿದ್ದ ಆ ಮನುಷ್ಯರು ಸೀಮೋನನ ಮನೆ ಯಾವುದು ಎಂದು ಕೇಳಿಕೊಂಡು ಬಂದು ಆ ಮನೆಯ ಬಾಗಿಲಲ್ಲಿ ನಿಂತು;"**

ಇದೇ ರೀತಿ ಇಂತಹ ಅನೇಕ ದರ್ಶನಗಳು ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಿ ದಾಖಲಾಗಿವೆ

ಈ ದಿನಗಳಲ್ಲಿ ದರ್ಶನಗಳು ಎಂದರೆ ಈ ರೀತಿಯಾಗಿ ಅರ್ಥ ಮಾಡಿಕೊಂಡಿದ್ದಾರೆ –

- **ಆ ವ್ಯಕ್ತಿಗಳೊಂದಿಗೆ ಕರ್ತನಾದ ಯೇಸು ದರ್ಶನದಲ್ಲಿ ಕಾಣಿಸಿಕೊಂಡು ಅವರೊಂದಿಗೆ ಮಾತನಾಡುವುದು.**
- **ಅಥವಾ... ಪವಿತ್ರಾತ್ಮ ನನ್ನು ಒಬ್ಬ ವ್ಯಕ್ತಿಯಂತೆ ಭೇಟಿಯಾಗುವಂತೆ ಸಂಧಿಸುವುದು.**
- **ಅಥವಾ.... ಪರಲೋಕಕ್ಕೆ ಎತ್ತಲ್ಪಡುವುದು, ನರಕವನ್ನು ನೋಡಿ ಭೇಟಿಯಾಗುವುದು.**

## ಸತ್ಯವೇದದ ಪ್ರಕಾರ ಇವೆಲ್ಲವೂ ನಿಜವೇ?

ಈಗ ನಾವು ಈ ವಿಷಯಗಳನ್ನು ಒಂದೊಂದಾಗಿ ನೋಡೋಣ

### 1.ದರ್ಶನದಲ್ಲಿ ಕಾಣಿಸಿಕೊಳ್ಳುವುದು ಅಥವಾ ಯೇಸುವಿನ ದರ್ಶನಗಳು

### ಈ ವಾಕ್ಯವನ್ನು ಓದೋಣ...



## ಅಪೋಸ್ತಲರ ಕೃತ್ಯಗಳು 9:5-9

**"ಅದಕ್ಕೆ ಸೌಲನು;, "ಕರ್ತನೇ, ನೀನಾರು?" ಎಂದು ಕೇಳಿದ್ದಕ್ಕೆ, ಕರ್ತನು, "ನೀನು ಹಿಂಸೆಪಡಿಸುವ ಯೇಸುವೇ ನಾನು; ನೀನೆದ್ದು ಊರೊಳಕ್ಕೆ ಹೋಗು, ನೀನು ಮಾಡಬೇಕಾದದ್ದು ಅಲ್ಲಿ ನಿನಗೆ ತಿಳಿಸಲ್ಪಡುವುದು" ಎಂದು ಹೇಳಿದನು. ಅವನ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದವರು ಧ್ವನಿಯನ್ನು ಮಾತ್ರ ಕೇಳಿ, ಯಾರನ್ನೂ ಕಾಣದೆ ಮೂಕರಂತೆ ವಿಸ್ಮಿತರಾಗಿ ನಿಂತರು. ಸೌಲನು ನೆಲದಿಂದ ಎದ್ದು ಕಣ್ಣು ತೆರೆದಾಗ ಏನೂ ಕಾಣಿಸಲಿಲ್ಲ. ಆಗ ಅವರು ಅವನನ್ನು ಕೈಹಿಡಿದು ದಮಸ್ಕದೊಳಕ್ಕೆ ಕರೆದುಕೊಂಡು ಹೋದರು. ಅವನು ಮೂರು ದಿನಗಳು ಕಣ್ಣುಕಾಣದೆ, ಏನೂ ತಿನ್ನಲಿಲ್ಲ ಮತ್ತು ಏನೂ ಕುಡಿಯದೇ ಇದ್ದನು."**

ಇಲ್ಲಿ ನಾವು ನೋಡುವುದೇನೆಂದರೆ, ಮಹಿಮೆಯ ನೆಲೆಯಲ್ಲಿದ್ದ ಕರ್ತನಾದ ಯೇಸುವನ್ನು ಕೊನೆಯವನಾಗಿ ಕಂಡದ್ದು ತಾರ್ಷಿಸಿನ ಸೌಲನು

**ಮತ್ತು ಅವನಿಗೇನಾಯಿತೆಂದು ಓದುತ್ತೇವೆ?**

ಅವನು ಕುರುಡನಾದನು ಮತ್ತು ಮೂರು ದಿವಸಗಳು ಏನೂ ತಿನ್ನಲಿಲ್ಲ ಅಥವಾ ನೀರು ಸಹ ಕುಡಿಯಲಿಲ್ಲ !!!

## ಹೀಗೆ ಏಕಾಯಿತು?

ಇದಕ್ಕೆ ಉತ್ತರವನ್ನು ಸ್ವತ: ಅಪೋಸ್ತಲನಾದ ಸೌಲನು ಹೇಳಿರುವುದನ್ನು ಕೆಳಗಿನ ವಾಕ್ಯದಲ್ಲಿ ಕೇಳೋಣ –

## ಅಪೋಸ್ತಲರ ಕೃತ್ಯಗಳು 26: 13

**"....ಓ ರಾಜನೇ, ನಾನು ದಾರಿಯಲ್ಲಿದ್ದಾಗ ಮಧ್ಯಾಹ್ನದಲ್ಲಿ ನನ್ನ ಮತ್ತು ನನ್ನ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದವರ ಸುತ್ತಲೂ ಸೂರ್ಯನ ಪ್ರಕಾಶಕ್ಕಿಂತ ಹೆಚ್ಚಾದ ಬೆಳಕು ಪರಲೋಕದಿಂದ ಪ್ರಕಾಶಿಸುತ್ತಿರುವುದನ್ನು ನಾನು ಕಂಡೆನು"**

## ನೀವು ನೋಡಿದಿರಾ?

ಕರ್ತನಾದ ಯೇಸುವಿನಿಂದ ವ್ಯಕ್ತವಾದ ಬೆಳಕು ಮಧ್ಯಾಹ್ನದ ಸೂರ್ಯನ ಪ್ರಕಾಶಕ್ಕಿಂತಲೂ ಹೆಚ್ಚು ಪ್ರಕಾಶಮಾನವಾಗಿತ್ತು. **ಕುರುಡಾಗಿಸುವಂತಹ** ಬಿಳುಪಾದ ಬೆಳಕು !

ಈ ದೊಡ್ಡ ದೇವರ ಸೇವಕನಿಗೆ ಈ ಅನುಭವವಾಗಿತ್ತೆಂದರೆ, ಈಗಿನ ಪ್ರವಾದಿಗಳು ಮತ್ತು ಉಪದೇಶಕರು ನಿಯಮಿತವಾಗಿ ಕರ್ತನ ದರ್ಶನಗಳನ್ನು

ಕಾಣುತ್ತಾರೆ. ಆದರೂ ಅವರಿಗೆ ಏನೂ ಆಗುವುದಿಲ್ಲ ??!

ಏಕೆ ಅಪೋಸ್ತಲನಾದ ಪೌಲನಿಗೆ ಆ ದರ್ಶನದಿಂದ ಆ ತೀವ್ರವಾದ ಪರಿಣಾಮ ಉಂಟಾಯಿತು ಮತ್ತು ಈ ದಿನಗಳ ಪ್ರವಾಗಿಗಳಿಗೆ ಮತ್ತು ಬೋಧಕರಿಗೆ ಉಂಟಾಗುವ ದರ್ಶನಗಳು ಅಷ್ಟೊಂದು ಮೆದುವಾಗಿಯೂ ಹಾನಿಕಾರಕವಿಲ್ಲದೆಯೂ ಇವೆ ?

ಈಗಿನ ಪ್ರವಾದಿಗಳು ಮತ್ತು ಬೋಧಕರು ಅಪೋಸ್ತಲನಾದ ಪೌಲನಿಗಿಂತ ದೊಡ್ಡವರೋ ????

ನಂತರ ನಾವು ಹೀಗೆ ನೋಡುತ್ತೇವೆ

## 2. "ದರ್ಶನ"ಗಳಲ್ಲಿ ಪ್ರವಿತ್ರಾತ್ಮನನ್ನು ವ್ಯಕ್ತಿಯ ರೀತಿಯಲ್ಲಿ ಭೇಟಿಯಾಗುವುದು.

ನಾವು ಮೊದಲೇ ಅಧ್ಯಯನ ಮಾಡಿದ ಹಾಗೆ (ಅಭ್ಯಾಸ ನಂ. 23 ತ್ರೈಯೇಕತ್ವ – ನಮ್ಮ ಕರ್ತನಾದ ಯೇಸು ದೇವರ ಪ್ರವಿತ್ರಾತ್ಮವನ್ನು ಕುರಿತು ನಮಗೆ ಬೋಧಿಸಿರುವುದನ್ನು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ.

**ಲೂಕ 24:49**

**" ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮ್ಮ ಮೇಲೆ ಕಳುಹಿಸುವೆನು; ಆದರೆ ನಿವು ಮೇಲಣ ಶಕ್ತಿಯನ್ನು ಹೊಂದವವರೆಗೆ ಯೆರೂಸಲೇಮ್ ಪಟ್ಟಣದಲ್ಲಿಯೇ ಕಾದುಕೊಂಡಿರ್ರಿ ಅಂದನು"**

ಹೌದು ! ಪವಿತ್ರಾತ್ಮವು ಮೇಲಣದ ಶಕ್ತಿಯಾಗಿದೆ.

ಕಣ್ಣಿಗೆ ಕಾಣದ ಮತ್ತು ಮಿತಿಯಿಲ್ಲದ ದೇವರ ಶಕ್ತಿಯಾಗಿದೆ.

**"ತ್ರೈಯೇಕತ್ವ"** ದಲ್ಲಿ (TRINITY) ಬೋಧಿಸುವ ಹಾಗೆ ಅದು ಒಬ್ಬ ವ್ಯಕ್ತಿಯಲ್ಲ, ಹೀಗೆ ಸತ್ಯವೇದದಲ್ಲಿ ಬರೆದಿರುವುದು ನಾವು ಎಲ್ಲಿಯೂ ಕಾಣುವುದಿಲ್ಲ ಮತ್ತು ಇದು **"ದೆವ್ವಗಳ ಬೋಧನೆಯಾಗಿವೆ"** ( 1 ತಿಮೊಥೆಯವದಿಗೆ 4 : 1)

ಮತ್ತು ಕೊನೆಯದಾಗಿ ನಾವು ಹೀಗೆ ನೋಡುತ್ತೇವೆ –

## 3. "ದರ್ಶನ"ದಲ್ಲಿ ಪರಲೋಕಕ್ಕೆ ಒಯ್ಯಲ್ಪಡುವುದು ಮತ್ತು ನರಕಕ್ಕೆ ಭೇಟಿಯಾಗುವುದು

ಹೌದು ! ನಾವು ಈಗ ಕೆಳಗಿನ ವಾಕ್ಯವನ್ನು ಓದೋಣ –

**1 ಕೊರಿಂಥದವರಿಗೆ 15:50** - **"ಸಹೋದರರೇ, ನಾನು ಹೇಳುವುದೇನೆಂದರೆ, ಮಾಂಸವು ರಕ್ತವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರವು"**

ಹೌದು ! ಯಾರೇ ಆಗಲಿ ಶರೀರಧಾರಿಯಾಗಿ ಪರಲೋಕಕ್ಕೆ **ಎಂದಿಗೂ** ಹೋಗಲು ಸಾಧ್ಯವಿಲ್ಲ.

ಆದರೆ ಕೆಲವರು ಈ ಕೆಳಗಿನ ವಾಕ್ಯವನ್ನು ಹೇಳಿ ಹೀಗೆ ಒತ್ತಾಯಿಸಬಹುದು.


**2 ಕೊರಿಂಥದವರಿಗೆ 12 : 2**

**"ಕ್ರಿಸ್ತನಲ್ಲಿದ್ದ ಒಬ್ಬ ಮನುಷ್ಯನನ್ನು ಬಲ್ಲೆನು. ಅವನು ಹದಿನಾಲ್ಕು ವರ್ಷಗಳ ಹಿಂದೆ ಮೂರನೆಯ ಆಕಾಶಕ್ಕೆ ಒಯ್ಯಲ್ಪಟ್ಟನು. ಅವನು ದೇಹಸಹಿತನಾಗಿ ಒಯ್ಯಲ್ಪಟ್ಟನೋ, ಅಥವಾ ದೇಹರಹಿತನಾಗಿ ಒಯ್ಯಲ್ಪಟ್ಟನೋ ನಾನರಿಯೆನು, ದೇವರೇ ಬಲ್ಲನು. ಅವನು ಪರದೈಸಿ ತನಕ ಒಯ್ಯಲ್ಪಟ್ಟು ಮನುಷ್ಯರಿಂದ ಉಚ್ಚರಿಸಲೂ, ಆಡಲೂ ಬಾರದಂತಹ ಮಾತುಗಳನ್ನು ಕೇಳಿದನೆಂದೂ ಬಲ್ಲೆನು. ಆ ಸಮಯದಲ್ಲಿ ಆತನು ದೇಹಸಹಿತನಾಗಿದ್ದನೋ ಅಥವಾ ದೇಹರಹಿತನಾಗಿದ್ದನೋ ನಾನರಿಯೆನು, ದೇವರೇ ಬಲ್ಲನು."**

ಈ ವಾಕ್ಯವನ್ನು ಆಧರಿಸಿ ಕೆಲವರು "ಪರಲೋಕಕ್ಕೆ ಒಯ್ಯಲ್ಪಡುವ" ಅನುಭವಗಳನ್ನು ಹೇಳಿಕೊಳ್ಳುತ್ತಾರೆ.

ಆದರೆ ಇಲ್ಲಿ ನಾವು ಗಮನಿಸಬೇಕಾದದ್ದು ಏನೆಂದರೆ "**ಮೂರನೇ ಪರಲೋಕ**" ಎಂಬುದನ್ನು ವಾಕ್ಯ 4– ರಲ್ಲಿ "ಪರದೈಸಕ್ಕೆ" ಎಂದು ಹೇಳಿ ವಿವರಿಸುತ್ತಾನೆ.

**"ಆತನು ಹೇಗೆ ಪರದೈಸಕ್ಕೆ" ಒಯ್ಯಲ್ಪಟ್ಟನು .."**



ಈ **"ಪರದೈಸವು"**, ನಮಗೆ ತಿಳಿದಿರುವ ಹಾಗೆ ಯೇಸು ಶಿಲುಬೆಯಲ್ಲಿರುವಾಗ ಕಳ್ಳನಿಗೆ ವಾಗ್ದಾನ ಮಾಡಿದ ಅದೇ **"ಪರದೈಸ"** ವಾಗಿದೆ.

**ಲೂಕ 23:43** - "ಅದಕ್ಕೆ ಯೇಸು, "ಈ ಹೊತ್ತೇ ನೀನು ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ" ಎಂದು ಉತ್ತರಕೊಟ್ಟನು."

ಹೌದು ! **"ಪರದೈಸ"** ಎಂದರೆ ಆ ಕಳ್ಳನು ಯೇಸು ತನಗೆ ಆಶೀರ್ವಧಿಸಬೇಕೆಂದು ಕೇಳಿದ ಪರಲೋಕದ ರಾಜ್ಯವಾಗಿದೆ.

ಈ ಮೂರನೇ ಲೋಕದಲ್ಲಿ "ನೀತಿಯು ವಾಸವಾಗಿರುವುದು" (11 ಪೇತ್ರನು 3: 13) ಮತ್ತು **ಏದೆನ್ ತೋಟದ** "ಪರದೈಸ" ದ ಹಾಗೆ ಈ ಲೋಕವು ಪುನ: ಸ್ಥಾಪನೆಯಾಗುವುದು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋವೇಲನು 2:3** - "ಅವುಗಳ ಮುಂದೆ ಬೆಂಕಿಯು ದಹಿಸುತ್ತದೆ, ಹಿಂದೆ ಜ್ವಾಲೆಯು ಧಗಧಗಿಸುತ್ತದೆ. ಅವು ಬರುವುದಕ್ಕೆ ಮೊದಲು ದೇಶವು ಏದೆನ್ ಉದ್ಯಾನದಂತೆ ಇತ್ತು, ಅವು ದಾಟಿಹೋದ ಮೇಲೆ ಬೆಂಗಾಡಾಯಿತು. ಹೌದು, ಅವುಗಳಿಂದ ಯಾವುದೂ ತಪ್ಪಿಸಿಕೊಳ್ಳಲಾರದು."

ಇದು ಎರಡನೆಯ ಲೋಕವು ನಾಶವಾದ **ನಂತರ, ಇಸ್ರಾಯೇಲಿನಲ್ಲಿ** ಕಣ್ಣಿಗೆ ಕಾಣುವ ರಾಜ್ಯದ ಹಂತವು ಬರುವುದು

**ಹೌದು ! " ....ಮುಂದೆ ದೇಶವು ಏದೆನ್ ತೋಟದ ಹಾಗಿದೆ".**

ಇದಲ್ಲದೆ ಯಾತನೆಯ ಸ್ಥಳವಾದ ನರಕದ **"ದರ್ಶನವನ್ನು"** ನೋಡಿದೆ ಎಂದು ಹೇಳಿಕೊಳ್ಳುವವರು ಮತ್ತು ಆತ್ಮಗಳು ಎಂದೆಂದಿಗೂ ಬೆಂಕಿಯಲ್ಲಿ ಸುಡುತ್ತಾ ಇರುವರು ಎಂಬುದೂ ಸಹ ಸತ್ಯವೇದದ ಬೋಧನೆ ಅಲ್ಲ !

ಸತ್ಯವೇದವು ನಮಗೆ ಬೋಧಿಸುವುದೇನೆಂದರೆ ಆತ್ಮಗಳು ನರಕದಲ್ಲಿ **ನಾಶವಾಗುತ್ತದೆ.**

**ಮತ್ತಾಯ 10: 28**

" ಶರೀರವನ್ನು ಕೊಲ್ಲುವವರಿಗೆ ಹೆದರಬೇಡಿರಿ, ಯಾಕಂದರೆ ಅವರು ಆತ್ಮವನ್ನು ಕೊಲ್ಲಲು ಶಕ್ತರಲ್ಲ; ಆದರೆ ಆತ್ಮ ಮತ್ತು ಶರೀರ ಎರಡನ್ನು ನರಕದಲ್ಲಿ ನಾಶ ಮಾಡಲು ಶಕ್ತನಾಗಿರುವಾತನಿಗೆ ಭಯಪಡಿರಿ"

ಕೊನೆಯದಾಗಿ ನಾವು ನೋಡಿರುವುದೇನೆಂದರೆ, ಹೆಸರಿಗೆ ಮಾತ್ರ ಕ್ರೈಸ್ತರ – ಬೋಧನೆಗಳು ಈ **ಎಲ್ಲಾ** ವಿಷಯಗಳಲ್ಲಿ **ಸಂಪೂರ್ಣವಾಗಿ ತಪ್ಪಾಗಿದೆ ಮತ್ತು ಇಂತಹ** ವಿಷಯಗಳನ್ನು ನಾವು ಸತ್ಯವೇದದಲ್ಲಿ **ಕಾಣುವುದಿಲ್ಲ** ಮತ್ತು ದೇವರ ವಾಕ್ಯವು ಹಾಗೆ ಬೋಧಿಸುವುದಿಲ್ಲ !!


**ಮುಕ್ತಾಯವಾಗಿ ನಾವು ಇಂದು ಅಧ್ಯಯನ ಮಾಡಿದ ಈ ಎಲ್ಲಾ ವಿಷಯಗಳನ್ನು ಕುರಿತು ಕರ್ತನ ವಾಕ್ಯವು ದಾಖಲಾಗಿರುವುದನ್ನು ಕುರಿತು ನಾವು ಹೀಗೆ ನೋಡುತ್ತೇವೆ.**

ಯೆರಮೀಯ 14 : 14

"ಆಗ ಕರ್ತನು ನನಗೆ ಹೇಳಿದ್ದೇನೆಂದರೆ - ಪ್ರವಾದಿಗಳು ನನ್ನ ಹೆಸರಿನಲ್ಲಿ ಸುಳ್ಳಗಿ ಪ್ರವಾದಿಸುತ್ತಾರೆ; ನಾನು ಅವರನ್ನು ಕಳುಹಿಸಲಿಲ್ಲ; ಅವರಿಗೆ ಆಜ್ಞೆ ಕೊಡಲಿಲ್ಲ; ಅವರ ಸಂಗಡ ಮಾತಾಡಲಿಲ್ಲ; ಸುಳ್ಳಿನ ದರ್ಶನವನ್ನೂ ಶಕುನವನ್ನು ಶೂನ್ಯವನ್ನೂ ತಮ್ಮ ಹೃದಯದ ಕಪಟವನ್ನೂ ನಿಮಗೆ ಪ್ರವಾದಿಸುತ್ತಾರೆ"


ಹೌದು! ಈ ಸತ್ಯಕ್ಕಾಗಿ ನಮ್ಮ ಕರ್ತನನ್ನು ತುಂಬಾ ವಂದನೆಗಳನ್ನು ಸಲ್ಲಿಸುವವರಾಗಿದ್ದೇವೆ.

ಏಕೆಂದರೆ ಅದು ನಿಜವಾಗಿಯೂ ನಮ್ಮನ್ನು ಬಿಡುಗಡೆ ಮಾಡಿದೆ!



............ಆಮೆನ್........

For Private Circulation Only




NOT FOR SALE